ಕರ್ನಾಟಕ ಸರ್ಕಾರ

ಪರಂಪರೆ ಮಾಲಿಕೆ

# ಮೈಸೂರು



ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಬೆಂಗಳೂರು



ಕರ್ನಾಟಕ ಸರ್ಕಾರ

ಪರಂಪರೆ ಮಾಲಿಕೆ

# ಮೈಸೂರು


ಸಂಪಾದಕರು:

**ನೀಲಾ ಮಂಜುನಾಥ್,** ಕೆ.ಎ.ಎಸ್
ಆಯುಕ್ತರು
ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

**ಡಾ. ಹೆಚ್.ಪಿ. ಶಶಿಧರಮೂರ್ತಿ**
ಚನ್ನರಾಯಪಟ್ಟಣ

ಅನುವಾದ:

**ಡಾ. ಜಗದೀಶ**
ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ



ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಬೆಂಗಳೂರು

ಮೊದಲ ಮುದ್ರಣ : 2010

ಹಕ್ಕುಗಳು : ©
ಆಯುಕ್ತರು
ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಬೆಂಗಳೂರು - 560 001 ದೂ: 080-2286 3736
ಈಮೇಲ್ : heritagebangalore@gmail.com

ಛಾಯಾಚಿತ್ರಗಳು :
ಎಂ.ಎನ್. ಮುರಳೀಧರ್
ವಿ.ಜಿ. ಶ್ರೀಧರ್

ಸೌಜನ್ಯ :
ಮೈಸೂರು ಅರಮನೆ ಮಂಡಳಿ
ಜಗನ್ಮೋಹನ ಆರ್ಟ್ ಗ್ಯಾಲರಿ

ವಿನ್ಯಾಸ ಮತ್ತು ಮುದ್ರಣ
ಸುಹಾಸ್ ಗ್ರಾಫಿಕ್ಸ್, ಬೆಂಗಳೂರು
ದೂ: 080 41672195 / 98453 55509
ಇ ಮೇಲ್ : suhaasgraphics@gmail.com

First edition : 2009

*Copyright* ©
Commissioner
Department of Archaeology, Museums & Heritage
Bangalore - 560 001 Ph : 080-2286 3736
E-mail : heritagebangalore@gmail.com

*Photographs*
M.N. Muralidhar
V.G. Sridhar


*Courtesy*
Mysore Palace Board
Jaganmohana Art Gallery

*Assistance*
Dr. Jagadish *Archaeological Conservation Engineer*


*Design & Printed*
Suhaas Graphics, Bangalore
Ph. : 98453 55509 E-mail: suhaasgraphics@gmail.com

## ಪರಿವಿಡಿ

1. ಸಂಕ್ಷಿಪ್ತ ಮಾಹಿತಿ / 5
2. ಇತಿಹಾಸದ ಪ್ರತಿಧ್ವನಿ / 6
3. ಚಾಮುಂಡೇಶ್ವರಿ ದೇವಾಲಯ – ನಂದಿ / 7
4. ಅರಸರ ವಂಶಾವಳಿ / 10
5. ಅರಸು ಪರಂಪರೆ
   - ಸಜ್ಜೆ ಅಥವಾ ದಸರಾ ಸಭಾಂಗಣ / 16
   - ಹೊಸ ದರ್ಬಾರ್ ಸಭಾಂಗಣ / 18
   - ಅಂಬಾ ವಿಲಾಸ / 20
   - ಕಲ್ಯಾಣ ಮಂಟಪ / 22
   - ಚಿನ್ನದ ಸಿಂಹಾಸನ / 24
   - ಚಿನ್ನದ ಅಂಬಾರಿ / 25
   - ಟಿಪ್ಪುವಿನ ಖಡ್ಗ / 25
   - ಅರಮನೆ ಆವರಣ
6. ಅರಮನೆ ಆವರಣದಲ್ಲಿರುವ ದೇವಾಲಯಗಳು / 28
7. ಇತರ ದೇವಾಲಯಗಳು ಮತ್ತು ಪೂಜಾ ಸ್ಥಳಗಳು / 36
8. ಅದ್ಭುತ ದಸರಾ ಉತ್ಸವ
   - ಈ ಹಿಂದಿನ ದಸರಾ ಉತ್ಸವ / 40
   - ದಸರಾ ಉತ್ಸವ ಇಂದು / 42
   - ದಸರಾ ಕ್ರೀಡೆ ಮತ್ತು ಮನರಂಜನೆ ಹಿಂದಿನ ಆಚರಣೆ / 48
   - ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು ಇಂದು / 49
   - ದುರ್ಗಾ ಪೂಜೆ / 49
9. ಪಾರಂಪರಿಕ ಅರಮನೆಗಳು / ಸೌಧಗಳು
   - ಜಗನ್ಮೋಹನ ಅರಮನೆ / 50
   - ಲಲಿತ್ ಮಹಲ್ / 52
   - ರಾಜೇಂದ್ರ ವಿಲಾಸ್ ಅರಮನೆ / 54
   - ಲೋಕರಂಜನ್ ಮಹಲ್ / 54
   - ಕಾರಂಜಿ ಸೌಧ / 55
   - ಜಯಲಕ್ಷ್ಮಿ ವಿಲಾಸ್ ಸೌಧ / 56
   - ಚೆಲುವಾಂಬ ವಿಲಾಸ್ ಸೌಧ / 58



10. ಪಾರಂಪರಿಕ ವಸ್ತು ಸಂಗ್ರಹಾಲಯಗಳು
ವೆಲ್ಲಿಂಗ್‌ಟನ್ ಲಾಡ್ಜ್ / 60
ರೈಲು ಸಂಗ್ರಹಾಲಯ / 60
ಜಾನಪದ ಸಂಗ್ರಹಾಲಯ / 61
ಪ್ರಾದೇಶಿಕ ಪ್ರಾಕೃತಿಕ ವಿಜ್ಞಾನ ವಸ್ತುಸಂಗ್ರಹಾಲಯ / 62
ಜಗನ್‌ಮೋಹನ್ ಅರಮನೆ – ಆರ್ಟ್ ಗ್ಯಾಲರಿ / 63
11. ಪಾರಂಪರಿಕ ಕಟ್ಟಡಗಳು
ಸರ್ಕಾರಿ ಅತಿಥಿ ಗೃಹ (ಗರ್ವನ್‌ಮೆಂಟ್ ಹೌಸ್) / 64
ಇಲವಾಲ ವಾಸದ ಬಂಗ್ಲೆ / 65
ಜಿಲ್ಲಾಧಿಕಾರಿಗಳ ಕಛೇರಿ / 65
ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ / 66
ಕ್ರಾಫರ್ಡ್ ಸಭಾಂಗಣ / 66
ರಂಗಾಚಾರ್ಲು ಸ್ಮಾರಕ ಸಭಾಂಗಣ / 67
ವಿಕ್ಟೋರಿಯ ಜ್ಯೂಬಿಲಿ ಸಂಸ್ಥೆ / 68
ದೊಡ್ಡ ಗಡಿಯಾರ / 68
ಲ್ಯಾನ್ಸ್‌ಡೌನ್ ಬಿಲ್ಡಿಂಗ್ / 70
ದೇವರಾಜ ಮಾರುಕಟ್ಟೆ / 70
ಕೃಷ್ಣರಾಜೇಂದ್ರ ಆಸ್ಪತ್ರೆ / 71
ಚಾಮರಾಜೇಂದ್ರ ವೃತ್ತ / 72
ಕೃಷ್ಣರಾಜೇಂದ್ರ ವೃತ್ತ / 74
ಚಾಮರಾಜೇಂದ್ರ ಮೃಗಾಲಯ / 74
ಕರ್ಜನ್ ಪಾರ್ಕ್ / 75
12. ಪಾರಂಪರಿಕ ಕೆರೆಗಳು
ಲಿಂಗಾಂಬುಧಿ ಕೆರೆ, ಕುಕ್ಕರಹಳ್ಳಿ ಕೆರೆ / 76
ಕಾರಂಜಿ ಕೆರೆ / 77
13. ಮೈಸೂರಿನ ನವರತ್ನಗಳು / 78
ನಗರ ನಕ್ಷೆ / 82



# ಮೈಸೂರು

## ಸಂಕ್ಷಿಪ್ತ ಮಾಹಿತಿ

ಮೈಸೂರು ಐತಿಹಾಸಿಕ, ಸಾಂಸ್ಕೃತಿಕ, ಮತ್ತು ಪಾರಂಪರಿಕ ನಗರವಾಗಿದೆ. ಇದು ರಾಜಧಾನಿ ಬೆಂಗಳೂರಿನಿಂದ 140 ಕಿ.ಮೀ. ದೂರದಲ್ಲಿದೆ. 128.42 ಚ.ಕಿ.ಮೀ. ವಿಸ್ತೀರ್ಣದಲ್ಲಿರುವ ಮೈಸೂರು, ನಗರಪಾಲಿಕೆಯ ಆಡಳಿತಕ್ಕೆ ಒಳಪಟ್ಟಿದೆ. ನಗರದ ಜನಸಂಖ್ಯೆಯು ಸುಮಾರು 15 ಲಕ್ಷವಿದೆ. ರಸ್ತೆ, ರೈಲು ಮತ್ತು ವಾಯು ಮಾರ್ಗಗಳಿಂದ ನಗರವು ಸಂಪರ್ಕ ಹೊಂದಿದೆ. ದಕ್ಷಿಣ ಭಾರತದ ಇತಿಹಾಸದಲ್ಲಿ ಮೈಸೂರು ಪ್ರಮುಖ ಪಾತ್ರ ಹೊಂದಿದೆ. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಮೈಸೂರು ಗುರ್ತಿಸಲ್ಪಟ್ಟಿದೆ.



# ಇತಿಹಾಸದ ಪ್ರತಿಧ್ವನಿ

ಮೈಸೂರಿನ ಪ್ರಾಚೀನ (ಹಿಂದಿನ) ಹೆಸರು ಮಹಿಶಊರು ಎಂದಿದ್ದು, ಎಂದಿನಿಂದ ಕರೆಯಲಾಗಿತ್ತೆಂದು ತಿಳಿದುಬಂದಿಲ್ಲ. ದೀಪವಂಶ ಎಂಬ ಬೌದ್ಧ ಇತಿಹಾಸ ಗಾಥೆ ಮೈಸೂರನ್ನು ಮಹಿಷ ರಾಷ್ಟ್ರ ಎಂದು ಉಲ್ಲೇಖಿಸಿದೆ. ಕ್ರಿಸ್ತ ಪೂರ್ವ 245ರಲ್ಲಿ ಸಾಮ್ರಾಟ ಅಶೋಕನು ಬೌದ್ಧ ಮತವನ್ನು ಹರಡಲು ಇಲ್ಲಿಗೆ ಬಿಕ್ಷುಗಳನ್ನು ಕಳುಹಿಸಿದ ಮಾಹಿತಿ ಇದೆ.

ಕ್ರಿ.ಶ. 11 ಮತ್ತು 12ನೇ ಶತಮಾನದಲ್ಲಿ "ಮೈಸುನಾಡು" ಮತ್ತು ಮೈಸೂರು ನಾಡು ಎಂಬ ಉಲ್ಲೇಖವಲ್ಲದೇ ಮಹಿಷಪುರಿ, ಮೈಸೂರು ಮತ್ತು ಮೈಸೂರ ಎಂಬ ಉಲ್ಲೇಖಗಳು ಶಾಸನಗಳಲ್ಲಿ ಮತ್ತು ಹಸ್ತಪ್ರತಿಗಳಲ್ಲಿ ಕಂಡುಬರುತ್ತದೆ. ಮಹಿಷಾಸುರನಿಂದಾಗಿ ಈ ನಗರಕ್ಕೆ ಮೈಸೂರು ಎಂಬ ಹೆಸರು ಬಂದಿದೆ. ದೇವಿ ಭಾಗವತದಲ್ಲಿನ ಪುರಾಣದಂತೆ ಮಹಿಷಾಸುರನು ಈ ನಗರವನ್ನು ಆಳುತ್ತಿದ್ದು ದೇವ ದೇವತೆಗಳಿಗೆ ಕಷ್ಟ ನೀಡುತ್ತಿದ್ದನು.
ಈ ಕಷ್ಟದಿಂದ ದೇವಲೋಕದವರನ್ನು ಪಾರುಮಾಡಲು ಶಿವನ ಪತ್ನಿಯಾದ ಪಾರ್ವತಿಯು, ಚಾಮುಂಡೇಶ್ವರಿಯ ಅವತಾರ ತಾಳಿ ರಾಕ್ಷಸನನ್ನು ಕೊಂದು ಬೆಟ್ಟದ ಮೇಲೆ ನೆಲೆಸಿದಳು. ಇಂದು ಈ ಬೆಟ್ಟವು ಚಾಮುಂಡಿ ಬೆಟ್ಟವೆಂದು ಪ್ರಸಿದ್ಧಿಯಾಗಿದ್ದು ನಿತ್ಯವೂ ಇಲ್ಲಿ ದೇವಿ ಭಕ್ತರಿಂದ ಪೂಜೆಗೊಳ್ಳುತ್ತಾಳೆ.

# ಚಾಮುಂಡಿ ಬೆಟ್ಟ

## ಚಾಮುಂಡೇಶ್ವರಿ ದೇವಾಲಯ

ಮೈಸೂರು ಅರಮನೆಯ ಆಗ್ನೇಯ ದಿಕ್ಕಿನಲ್ಲಿ ಸುಮಾರು 3 ಕಿ.ಮೀ. ದೂರದಲ್ಲಿ ಚಾಮುಂಡಿ ಬೆಟ್ಟವಿದೆ. ಇದು ಸಮುದ್ರ ಮಟ್ಟದಿಂದ 1074 ಮೀ. ಎತ್ತರವಿದೆ. ಪಶ್ಚಿಮ ದಿಕ್ಕಿನಲ್ಲಿರುವ ಅರಮನೆಯಿಂದ ನೋಡಿದರೆ ಚಾಮುಂಡಿ ಬೆಟ್ಟವು ಹತನಾದ ಮಹಿಷಾಸುರ ಮಲಗಿದಂತೆ ತೋರುತ್ತದೆ. ಬೆಟ್ಟದ ಮೇಲಿರುವ ಪ್ರಾಚೀನ ದೇವಾಲಯ ಮರ್ಬಲ ಅಥವಾ ಮಹಾಬಲೇಶ್ವರ, ಗಂಗರ ಕಾಲದ ದೇವಾಲಯ. ಈ ಮೂಲ ದೇವಾಲಯಕ್ಕೆ ಹೊಯ್ಸಳ ಕಾಲದಲ್ಲಿ ಕಂಭಗಳುಳ್ಳ ಮಂಟಪ ಮತ್ತು ದ್ವಾರವನ್ನು ಸೇರಿಸಲಾಗಿದೆ. ಗರ್ಭಗೃಹದಲ್ಲಿರುವ ದೇವಿಯ ಪ್ರತಿಮೆಯು ಹೊಯ್ಸಳರ ಕಾಲದ್ದೆಂದು ನಂಬಲಾಗಿದೆ. ಶಿವನ ಪತ್ನಿಯಾದ ಪಾರ್ವತಿಯು ಚಾಮುಂಡಿ (ಕಾಳಿ) ದೇವಿಯ ರೂಪದಲ್ಲಿ ಕ್ರಿ.ಶ. 16ನೇ ಶತಮಾನದಲ್ಲಿ ಮೈಸೂರು ಅರಸು ಮನೆ ದೇವತೆಯಾದಳು.



ಚಾಮುಂಡಿ ಬೆಟ್ಟಕ್ಕೆ ಸುಮಾರು 1000 ಮೆಟ್ಟಿಲುಗಳನ್ನು ಒಂದನೇ ದೊಡ್ಡ ದೇವರಾಜ ಒಡೆಯರ್ (ಕ್ರಿ.ಶ. 1659–1672) ಮಾಡಿಸಿದರು. ದೇವಾಲಯದ ಜೀರ್ಣೋದ್ಧಾರ ಮತ್ತು ದ್ವಾರ ಗೋಪುರವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ನಿರ್ಮಿಸಿದರು. ಸುಂದರವಾದ ಈ ಮಹಾದ್ವಾರ ಗೋಪುರ ಮೈಲುಗಳಾಚೆಯಿಂದಲೂ ಗೋಚರಿಸುತ್ತದೆ. ಈ ದೇವಾಲಯದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ಅವರ ಪತ್ನಿಯರ ಪ್ರತಿಮೆಗಳಿವೆ. ಬೆಟ್ಟದ ಮೇಲಿರುವ ದೇವಾಲಯಕ್ಕೆ ವಾಹನ ಸಂಚಾರದ ರಸ್ತೆಯನ್ನು 1916ರಲ್ಲಿ ಪ್ರಾರಂಭಿಸಲಾಯಿತು. ಎಡಗೈಯಲ್ಲಿ ಸರ್ಪ ಮತ್ತು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿರುವ ಮಹಿಷಾಸುರನ 3.50 ಮೀ ಎತ್ತರದ ಪ್ರತಿಮೆ ಚಾಮುಂಡೇಶ್ವರಿ ದೇವಾಲಯದ ಮುಂಭಾಗದಲ್ಲಿ ಇದೆ.

ಚಾಮುಂಡೇಶ್ವರಿ ದೇವಾಲಯ – ಚಾಮುಂಡಿ ಬೆಟ್ಟ





## ನಂದಿ

ಚಾಮುಂಡಿ ಬೆಟ್ಟದ ಸುಮಾರು 700 ಮೆಟ್ಟಿಲುಗಳನ್ನು ಹತ್ತಿದ ನಂತರ ವೀಕ್ಷಕರು ನಂದಿಯ ದರ್ಶನ ಪಡೆಯಬಹುದು. ಸುಮಾರು 16 ಅಡಿ ಎತ್ತರ ಮತ್ತು 25 ಅಡಿ ಉದ್ದವಿರುವ ನಂದಿಯು ಎತ್ತರವಾದ ಪೀಠದ ಮೇಲೆ ಕುಳಿತಂತೆ ಕೆತ್ತಲಾಗಿದೆ. ಗೆಜ್ಜೆ ಮತ್ತು ಗಂಟೆಗಳ ಸರಗಳಿಂದ ನಂದಿಯನ್ನು ಅಲಂಕರಿಸಿದಂತೆ ತೋರಿಸಲಾಗಿದೆ.

ಪ್ರತಿ ವರ್ಷ ವಿಜಯದಶಮಿಯ ನಂತರ ಬೆಟ್ಟದ ಜಾತ್ರೆ ನಡೆಯುತ್ತದೆ. ಆಶ್ವೀಜ ಪೂರ್ಣಿಮೆಯಂದು ದೇವರ ರಥೋತ್ಸವ ಜರಗುತ್ತದೆ. ಮರುದಿನ ದೇವಿಯ ತೆಪ್ಪೋತ್ಸವವು ದೇವಾಲಯದ ಮುಂದಿರುವ ಕೊಳದಲ್ಲಿ ನಡೆಯುತ್ತಿದ್ದು ಬಹಳ ಜನರು ಇದನ್ನು ವೀಕ್ಷಿಸುತ್ತಾರೆ.

ನಂದಿ – ಚಾಮುಂಡಿ ಬೆಟ್ಟ



## ಅರಸರ ವಂಶಾವಳಿ



ಯದುರಾಯ

ಪೌರಾಣಿಕ ಕಥೆಗಳನ್ನು ಬಿಟ್ಟರೆ, ಇಂದಿನ ಗುಜರಾತ್ ರಾಜ್ಯದ ದ್ವಾರಕೆಯ ಯದುರಾಯ ಅಥವಾ ವಿಜಯ ಎಂಬ ಹೆಸರಿನ ಯಾದವ ದೊರೆಯು ಶೌರ್ಯದಿಂದ ಉಪಟಳ ನೀಡುತ್ತಿದ್ದ ದಂಡನಾಯಕನನ್ನು ಕೊಂದು ಅನಾಥ ರಾಜಕುಮಾರಿಯನ್ನು ರಕ್ಷಿಸಿ, ಆಕೆಯನ್ನು ವರಿಸಿ ಆಡಳಿತದ ಸೂತ್ರವನ್ನು ಕ್ರಿ.ಶ. 1399ರಲ್ಲಿ ವಹಿಸಿಕೊಂಡನು. ಈ ಪ್ರಸಂಗವು ಭಾರತದಲ್ಲಿ ಪ್ರಾಚೀನ ರಾಜವಂಶವಾಗಿ ಗಣನೆಯಲ್ಲಿರುವ ಒಡೆಯರ್ ರಾಜವಂಶದ ಆಳ್ವಿಕೆಗೆ ನಾಂದಿ ಹಾಡಿತು.

ಈ ವಂಶದ ಅರಸ ಮೂರನೆಯ ಬೆಟ್ಟದ ಚಾಮರಾಜ ಒಡೆಯರ್ (ಕ್ರಿ.ಶ. 1513–1553) "ಪುರಗೆರೆ" ಎಂದು ಕರೆಯಲಾಗಿದ್ದ ಪ್ರದೇಶವನ್ನು ವಿಸ್ತರಿಸಿ ಅರಮನೆ ಮತ್ತು ಕೋಟೆಯನ್ನು ಕ್ರಿ.ಶ. 1524ರಲ್ಲಿ ನಿರ್ಮಿಸಿದರು. ಮೈಸೂರು ಅರಸರು ವಿಜಯನಗರದ ಆಡಳಿತಕ್ಕೆ ಮೊದಲಿನಿಂದಲೂ ಒಳಪಟ್ಟಿದ್ದರು.

ಈ ವಂಶದ ಮೊದಲನೇ ರಾಜ ಒಡೆಯರ್ (ಒಂಭತ್ತನೆಯ ಅರಸು ಕ್ರಿ.ಶ. 1578–1617) ಕ್ರಿ.ಶ. 1610ರಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಅರಸರ ಪ್ರತಿನಿಧಿಯ ಬದಲಾಗಿ ಅಧಿಕಾರ ವಹಿಸಿಕೊಂಡು ಅರಮನೆಯನ್ನು ಈ ಪಟ್ಟಣಕ್ಕೆ ಸ್ಥಳಾಂತರಿಸಿದ. ಕಂಠೀರವ ನರಸಿಂಹರಾಜ ಒಡೆಯರ್ (ಕ್ರಿ.ಶ. 1638–1659) ಸುತ್ತಲ ಪ್ರಾಂತೀಯ ಮುಖ್ಯಸ್ಥರನ್ನು ಸೋಲಿಸಿ "ಕಂಠೀರಾಯ ಹಣ" ಎಂಬ ನಾಣ್ಯವನ್ನು ಚಾಲನೆಗೆ ತಂದರು. ಇವು ಈತನ ಆಳ್ವಿಕೆಯ ಅನಂತರವೂ ಚಲಾವಣೆಯಲ್ಲಿದ್ದವು. ಚಿಕ್ಕ ದೇವರಾಜ ಒಡೆಯರ್ (ಕ್ರಿ.ಶ. 1673–1704) ಆಳ್ವಿಕೆಯಲ್ಲಿ ಮೈಸೂರು ರಾಜ್ಯವು ವಿಸ್ತಾರ ಹೊಂದಿ ಆಡಳಿತದಲ್ಲಿ ಮರು ಹೊಂದಾಣಿಕೆಯಾಯಿತು.

ಹದಿನೆಂಟನೆಯ ಶತಮಾನದುದ್ದಕ್ಕೂ ದಕ್ಷಿಣ ಭಾರತ ಮತ್ತು ದಖ್ಖನ್ ಪ್ರದೇಶದ ಆಳ್ವಿಕೆಯ ಹಿಡಿತಕ್ಕೆ ಮೊಘಲರು, ಮರಾಠರು, ಆಂಗ್ಲರು ಮತ್ತು ಫ್ರೆಂಚರ ನಡುವೆ ಆಗಾಗ್ಗೆ ಕದನಗಳಾಗುತ್ತಿದ್ದವು. ಮೈಸೂರಿನ ದಳವಾಯಿ ಹಾಗೂ ಮಂತ್ರಿ ತನ್ನ ಆಕಾಂಕ್ಷೆಯನ್ನು ಈಡೇರಿಸಿಕೊಳ್ಳಲು ಬೊಕ್ಕಸದ ಹಣವನ್ನು ದುರುಪಯೋಗ



ಪಡಿಸಿಕೊಂಡ. ಇವರಲ್ಲೊಬ್ಬನಾದ ಹೈದರ್ ಅಲಿಖಾನ್ ಕ್ರಿ.ಶ. 1761 ಮೈಸೂರು ರಾಜ್ಯವನ್ನು ಆಕ್ರಮಿಸಿಕೊಂಡನು.

ಹೈದರ್ ಅಲಿಖಾನ್ (ಕ್ರಿ.ಶ. 1761–1782) ಮತ್ತು ಅವನ ಮಗ ಟಿಪ್ಪು ಸುಲ್ತಾನ್ (ಕ್ರಿ.ಶ. 1782–1799) ತಮ್ಮ ಸಾಹಸಮಯ ಪರಾಕ್ರಮದಿಂದ ಎಲ್ಲ ದಿಕ್ಕುಗಳಲ್ಲಿ ಮೈಸೂರು ರಾಜ್ಯವನ್ನು ವಿಸ್ತರಿಸಿದರು. ಈ ಪ್ರಯತ್ನದಲ್ಲಿ ಅವರು ಪುಣೆಯ ಮರಾಠರು, ಹೈದಾರಾಬಾದಿನ ನಿಜಾಮರು ಮತ್ತು ಆಂಗ್ಲರೊಂದಿಗೆ ಅನೇಕ ಬಾರಿ ಪ್ರತಿರೋದವನ್ನು ಎದುರಿಸಿದರು. ಇವು ಮೈಸೂರಿನ ನಾಲ್ಕು ಯುದ್ಧಗಳೆಂದು ಪ್ರಸಿದ್ಧಿಯಾಗಿವೆ (1767–69, 1780–84, 1790–91 ಮತ್ತು 1799).

ಮೈಸೂರಿನ ನಾಲ್ಕನೆಯ ಮತ್ತು ಕೊನೆಯ ಯುದ್ಧದಲ್ಲಿ ಆಂಗ್ಲರು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡರು ಮತ್ತು 4 ಮೇ, 1799ರಂದು ಟಿಪ್ಪು ಹತನಾದ. ಒಪ್ಪಂದದಂತೆ ಆಂಗ್ಲರು ಮತ್ತು ಹೈದರಾಬಾದಿನ ನಿಜಾಮರು ಟಿಪ್ಪು ರಾಜ್ಯವನ್ನು ತಮ್ಮೊಳಗೆ ದಿನಾಂಕ 22 ಜೂನ್, 1799ರಂದು ಹಂಚಿಕೊಂಡರು. ಆ ಸಂದರ್ಭದಲ್ಲಿ ಒಂದು ಸಣ್ಣ ಪ್ರಾಂತ್ಯವನ್ನು ಒಡೆಯರ್ ವಂಶದ 5 ವರ್ಷದ ಬಾಲಕನಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ದಕ್ಷ ದಿವಾನರಾದ ಪೂರ್ಣಯ್ಯನವರಿಗೆ ವಹಿಸಿಕೊಟ್ಟರು.

1831 ರಿಂದ 1881ರ ಅವಧಿಯಲ್ಲಿ ಬ್ರಿಟೀಷ್ ಕಮಿಷನರ್‌ಗಳಾದ ಸರ್ ಮಾರ್ಕ್ ಕಬ್ಬನ್ (1834–1861) ಮತ್ತು ಎಲ್.ಬಿ. ಬೌರಿಂಗ್ (1862–1869) ಮೈಸೂರು ಪ್ರಾಂತ್ಯವನ್ನು ಔದಾರ್ಯದಿಂದ ಆಳಿದರು.

ಮಾರ್ಚ್ 1881ರಲ್ಲಿ ಮೈಸೂರು ಅರಸು ವಂಶದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ದತ್ತಕ್ಕ ಪುತ್ರ ಹತ್ತನೆಯ ಚಾಮರಾಜೇಂದ್ರ ಒಡೆಯರ್ (1881–1894) ಅವರಿಗೆ ಮೈಸೂರು ಆಡಳಿತವನ್ನು ಮರು ಒಪ್ಪಿಸಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ (1902–1940) ಅವರು ಸಮರ್ಥ ದಿವಾನರ ನೆರವಿನಿಂದ ಮೈಸೂರು ರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ಅಭಿವೃದ್ಧಿ ಪಡಿಸಿದರು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು "ರಾಜರ್ಷಿ" ಎಂದು ಹೆಸರಾದರು. ಅವರ ಸೋದರ ಮತ್ತು ಉತ್ತರಾಧಿಕಾರಿ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ (1940–1947) ಬಹಳ ಪ್ರಸಿದ್ಧಿ ಮತ್ತು ಜನಪ್ರಿಯತೆಯನ್ನು ಗಳಿಸಿದರು. ದೇಶವು ಸ್ವಾತಂತ್ರ್ಯಗಳಿಸಿದಾಗ ಮೈಸೂರು ರಾಜ್ಯವನ್ನು ಭಾರತದ ಒಕ್ಕೂಟಕ್ಕೆ ಬಿಟ್ಟು ಕೊಟ್ಟರು.



ನಾಲ್ವಡಿ ಕೃಷ್ಣರಾಜ ಒಡೆಯರ್



## ಮೈಸೂರು ಅರಸರ ವಂಶಾವಳಿ


| | | |
|---|---|---|
| 1. | ಆದಿ ಯದುರಾಯ | 1399-1423 |
| 2. | ಒಂದನೆಯ ಹಿರಿಯ ಬೆಟ್ಟದ ಚಾಮರಾಜ ಒಡೆಯರ್ | 1423-1459 |
| 3. | ಒಂದನೆಯ ತಿಮ್ಮರಾಜ ಒಡೆಯರ್ | 1459-1478 |
| 4. | ಇಮ್ಮಡಿ ಹಿರಿಯ ಚಾಮರಾಜ ಒಡೆಯರ್ | 1478-1513 |
| 5. | ಮುಮ್ಮಡಿ ಹಿರಿಯ ಬೆಟ್ಟದ ಚಾಮರಾಜ ಒಡೆಯರ್ | 1513-1553 |
| 6. | ಇಮ್ಮಡಿ ತಿಮ್ಮರಾಜ ಒಡೆಯರ್ | 1553-1572 |
| 7. | ನಾಲ್ವಡಿ ಬೋಳ ಚಾಮರಾಜ ಒಡೆಯರ್ | 1572-1576 |
| 8. | ಐದನೆಯ ಬೆಟ್ಟದ ಚಾಮರಾಜ ಒಡೆಯರ್ | 1576-1578 |
| 9. | ಒಂದನೆಯ ರಾಜ ಒಡೆಯರ್ | 1578-1617 |
| 10. | ಐದನೆಯ ಚಾಮರಾಜ ಒಡೆಯರ್ | 1617-1637 |
| 11. | ಇಮ್ಮಡಿ ರಾಜ ಒಡೆಯರ್ | 1637-1638 |
| 12. | ರಣಧೀರ ಕಂಠೀರವ ನರಸರಾಜ ಒಡೆಯರ್ | 1638-1659 |
| 13. | ದೊಡ್ಡ ದೇವರಾಜ ಒಡೆಯರ್ | 1659-1673 |
| 14. | ಚಿಕ್ಕ ದೇವರಾಜ ಒಡೆಯರ್ | 1613-1704 |
| 15. | ಕಂಠೀರವ ಮಹಾರಾಜ ಒಡೆಯರ್ | 1704-1714 |
| 16. | ದೊಡ್ಡ ಕೃಷ್ಣರಾಜ ಒಡೆಯರ್ | 1714-1732 |
| 17. | ಏಳನೆಯ ಚಾಮರಾಜ ಒಡೆಯರ್ | 1732-1734 |
| 18. | ಇಮ್ಮಡಿ ಕೃಷ್ಣರಾಜ ಒಡೆಯರ್ | 1734-1766 |
| 19. | ನಂಜರಾಜ ಒಡೆಯರ್ | 1766-1770 |
| 20. | ಎಂಟನೆಯ ಬೆಟ್ಟದ ಚಾಮರಾಜ ಒಡೆಯರ್ | 1770-1776 |
| 21. | ಒಂಬತ್ತನೆಯ ಕಾಸಾ ಚಾಮರಾಜ ಒಡೆಯರ್ | 1776-1796 |
| 22. | ಮುಮ್ಮಡಿ ಕೃಷ್ಣರಾಜ ಒಡೆಯರ್ | 1799-1868 |
| 23. | ಹತ್ತನೆಯ ಚಾಮರಾಜೇಂದ್ರ ಒಡೆಯರ್ | 1868-1894 |
| 24. | ನಾಲ್ವಡಿ ಕೃಷ್ಣರಾಜ ಒಡೆಯರ್ | 1902-1940 |
| 25. | ಶ್ರೀ ಜಯಚಾಮರಾಜ ಒಡೆಯರ್ | 1940-1947 |

# ಅರಸು ಪರಂಪರೆ

## ಅರಸೊತ್ತಿಗೆಯ ನೆನಪುಗಳು

ದಿವಾನ್ ಪೂರ್ಣಯ್ಯನವರಿಂದ 1800–1805ರಲ್ಲಿ ನಿರ್ಮಾಣವಾದ ಮೈಸೂರು ಕೋಟೆಯು ಆಯತಾಕಾರವಾಗಿದೆ. 1912ರಲ್ಲಿ ಈಗಿನ ಅರಮನೆಯ ನಿರ್ಮಾಣಕ್ಕೆ ಕೋಟೆ ಭಾಗದಲ್ಲಿದ್ದ ವಸತಿ ಕಟ್ಟಡಗಳನ್ನು ಕೆಡವಲಾಯಿತು.

ಮಹಾರಾಜರ ಈ ಹಿಂದಿನ ಅರಮನೆಯು ಆದರ ವೈಭವೋಪೇತ ನೋಟಕ್ಕೆ ಹೆಸರು ವಾಸಿಯಾಗಿದ್ದು, ಫೆಬ್ರವರಿ 1897ರಲ್ಲಿ ಜಯಲಕ್ಷ್ಮಿ ಅಮ್ಮಣ್ಣಿಯವರ ವಿವಾಹ ಸಂದರ್ಭದಲ್ಲಿ ಅಗ್ನಿ ಆಕಸ್ಮಿಕದಲ್ಲಿ ಭಾಗಶಃ ಸುಟ್ಟು ಹೋಯಿತು. ಮದ್ರಾಸ್ ಪ್ರಾಂತ್ಯದ ಬ್ರಿಟಿಷ್ ವಾಸ್ತು ಶಿಲ್ಪಿ ತಜ್ಞನಾದ ಹೆನ್ರಿ ಇರ್‌ವಿನ್ ಈಗಿನ ಅಂಬಾ ವಿಲಾಸ ಅರಮನೆಯ ವಿನ್ಯಾಸ ಸಿದ್ಧಪಡಿಸಿದನು. ಭಾರತೀಯ–ಪರ್ಶಿಯನ್ ಶೈಲಿಯ ಗುಮ್ಮಟಗಳು. ಸಣ್ಣ ಬುರುಜು ಕಮಾನುಗಳು ಮತ್ತು ಕಂಭ ಸಾಲುಗಳಿಂದ ಅಲಂಕೃತವಾದ ಭವ್ಯ ಅರಮನೆಯನ್ನು 1912ರಲ್ಲಿ ರೂ. 41.05 ಲಕ್ಷಗಳನ್ನು ವೆಚ್ಚಮಾಡಿ ನಿರ್ಮಿಸಲಾಯಿತು.




ಹಳೆಯ ಅರಮನೆ

1938ರಲ್ಲಿ ಹೊಸ ದರ್ಬಾರ್ ಸಭಾಂಗಣವನ್ನು ಅರಮನೆ ಕಟ್ಟಡದ ಮುಂಭಾಗಕ್ಕೆ ಸೇರಿಸಲಾಯಿತು. ಅಲಂಕೃತ ಮೇಲ್ಛಾವಣಿ, ಕೆತ್ತನೆಯ ಕಂಭಗಳು ತೂಗು ಹಾಕಿದ ದೀಪಗಳು, ನವಿಲಿನಂತೆ ಹೊಂದಿಸಲಾದ ಬಣ್ಣದ ಗಾಜುಗಳನ್ನು ಬೆಲ್ಜಿಯಂನಿಂದ ತರಲಾಗಿದೆ. ಕುಸುರಿ ಕೆಲಸ ಮತ್ತು ವೈಭವಯುತವಾದ ಹಾಗೂ ಅದ್ಭುತವಾದ ಪ್ರಮಾಣಗಳನ್ನು ಹೊಂದಿದ ವಾಸ್ತು ಶೈಲಿಯ ಕಟ್ಟಡಕ್ಕೆ ಕಣ್ಣನತಣಿಸುವ ನೋಟವನ್ನು ನೀಡುವುದಲ್ಲದೆ ನೆಳಲು – ಬೆಳಕುಗಳ ಮೆರುಗನ್ನು ನೀಡುತ್ತದೆ.



## ಸಜ್ಜೆ ಅಥವಾ ದಸರಾ ಸಭಾಂಗಣ

ಮೊದಲ ಮಹಡಿಯಲ್ಲಿ 42.75 x 12.70 ಮೀ ಅಳತೆಯ ಸಜ್ಜೆ ಅಥವಾ ದಸರಾ ಸಭಾಂಗಣಕ್ಕೆ ಅಗಲವಾದ ಮೆಟ್ಟಿಲುಗಳ ಮುಖಾಂತರ ಹತ್ತಿ ಹೋಗಬಹುದು. ಈ ಸಭಾಂಗಣದಲ್ಲಿ ಕಣಶಿಲೆಯ ಕಂಭಗಳು ಮತ್ತು ವಿವಿಧ ಮಾದರಿಯಲ್ಲಿ ಅಲಂಕರಿಸಿದ ಮೇಲ್ಛಾವಣಿ ಇದೆ. ಈ ಸಭಾಂಗಣದ ಹಿಂಬದಿಯ ಗೋಡೆಯಲ್ಲಿ ಪ್ರಸಿದ್ಧ ವರ್ಣ ಚಿತ್ರಕಾರ ರಾಜಾ ರವಿವರ್ಮ ರಚಿಸಿದ ಸೀತಾ ಸ್ವಯಂವರ ಚಿತ್ರ ಇದೆ. ಇದೇ ಸಭಾಂಗಣದಲ್ಲಿ ಚಿತ್ರಕಾರ ಮತ್ತು ಶಿಲ್ಪಿ ಸಿದ್ಧಲಿಂಗಸ್ವಾಮಿ ಯವರು ರಚಿಸಿದ ದೇವಿಯ ಎಂಟು ರೂಪಗಳ ಚಿತ್ರಗಳಿವೆ.





## ಹೊಸ ದರ್ಬಾರ್ ಹಾಲ್

ಅರಮನೆಯ ಒಂದು ಭಾಗವಾದ ಹೊಸ ಸಭಾಂಗಣವನ್ನು (ದರ್ಬಾರ್ ಹಾಲ್) 1938ರಲ್ಲಿ ನಿರ್ಮಿಸಲಾಯಿತು. ಇದು 74.68 ಮೀ. ಉದ್ದ ಮತ್ತು 24.38 ಮೀ ಅಗಲವಿದ್ದು ಮೂರು ಕಡೆ ಗೋಡೆಗಳಿಂದ ಸುತ್ತುವರಿಯಲ್ಪಟ್ಟು ಪೂರ್ವಕ್ಕೆ ಪೂರ್ಣ ತೆರೆದುಕೊಂಡಿದೆ. ಈ ಸಭಾಂಗಣವು 15.84 ಮೀ ಎತ್ತರವಿದೆ. ಸಭಾಂಗಣದ ಮೇಲ್ಛಾವಣಿಯಲ್ಲಿ ಮೈಸೂರಿನ ಪ್ರಸಿದ್ಧ ಶಿಲ್ಪಿ ಮತ್ತು ಚಿತ್ರಕಾರ ಸಿದ್ಧಲಿಂಗ ಸ್ವಾಮಿಯವರು ರಚಿಸಿರುವ ವಿಷ್ಣುವಿನ ದಶಾವತಾರ ಚಿತ್ರಗಳಿವೆ. ಮಧ್ಯದ ಅಂಕಣದ ಮೇಲ್ಛಾವಣಿಯಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಸುತ್ತುವರಿದಂತೆ ಚಿತ್ರಿಸಿರುವ 12 ರಾಶಿಗಳ ಚಿತ್ರವಿದೆ.

ಪೂರ್ವದಿಂದ ವೀಕ್ಷಿಸಿದಾಗ ಅರಮನೆಯ ಒಂಭತ್ತು ಕಮಾನುಗಳಿಂದ ಕೂಡಿದ್ದು ಕಮಾನುಗಳು ಅಲಂಕೃತ ಕಂಭಗಳ ಮೇಲಿವೆ. ಈ ಕಮಾನುಗಳ ಎರಡೂ ಪಕ್ಕದಲ್ಲಿ ಶಿಲೆಯ ಜೋಡಿ ಗೋಪುರಗಳಿವೆ. ಅರಮನೆಯು 16 ಗುಮ್ಮಟಗಳಿಂದ ಕೂಡಿದ್ದು, ಛತ್ರಾಕಾರದ ಗೋಪುರದ ಮಧ್ಯದಲ್ಲಿರುವ ಅರ್ಧವೃತ್ತಾಕಾರದ



ಗುಮ್ಮಟದ ಕೆಳಗೆ ಸುಂದರ ಗಜಲಕ್ಷ್ಮಿ ಶಿಲ್ಪವಿದೆ. ಇದರ ಎರಡೂ ಪಕ್ಕದಲ್ಲಿ ಇರುವ ತೆರೆದ ಅಂಕಣದ ಮೇಲೆ ಗುಮ್ಮಟಗಳಿವೆ (ಛತ್ರಿಗಳು).

ದಸರಾ ಮತ್ತು ಇತರ ಹಬ್ಬ ಹರಿ ದಿನಗಳಲ್ಲಿ ಅರಮನೆ ಮತ್ತು ದರ್ಬಾರ್ ಸಭಾಂಗಣವು ನೂರಾರು ವಿದ್ಯುತ್ ಬಲ್ಬುಗಳಿಂದ ಪ್ರಕಾಶಿಸುತ್ತದೆ. ಈ ನೋಟ ಮತ್ತು ವಿನ್ಯಾಸ ಇಲ್ಲೆಲ್ಲಿಯೂ ಮತ್ತು ಬೇರೆಡೆಯಲ್ಲಿಯೂ ಕಾಣಸಿಗುವುದಿಲ್ಲ.







## ಅಂಬಾ ವಿಲಾಸ – ಖಾಸಗಿ ದರ್ಬಾರ್

ದರ್ಬಾರ್ ಸಭಾಂಗಣದ ನಂತರ ಅರಮನೆಯ ಮಹತ್ವದ ಇನ್ನೊಂದು ಭಾಗವೆಂದರೆ ಎರಡನೆಯ ಮಹಡಿಯಲ್ಲಿರುವ ಅಂಬಾವಿಲಾಸ-ಖಾಸಗಿ ದರ್ಬಾರ್ (ದಿವಾನ್-ಎ-ಖಾಸ್). ಈ ಭಾಗದಲ್ಲಿ ಎರಕಹೊಯ್ದ ಕಬ್ಬಿಣದ ಕಂಭಗಳು ಮತ್ತು ಅಲಂಕೃತ ಬಣ್ಣದ ಗಾಜಿನ ಛಾವಣಿ ಇದೆ. ಇಲ್ಲಿನ ಮೂರು ಬಾಗಿಲುಗಳನ್ನು ಬೀಟೆ ಮರದಿಂದ ತಯಾರಿಸಲಾಗಿದ್ದು ಚಿತ್ತಾರಗಳನ್ನು ಆನೆಯ ದಂತದಿಂದ ಅಲಂಕರಿಸಲಾಗಿದೆ. ಪೂರ್ವದ ಬೆಳ್ಳಿಯ ಬಾಗಿಲ ಮೇಲೆ ಒಂದು ಬದಿಯಲ್ಲಿ ವಿಷ್ಣುವಿನ ದಶಾವತಾರವಿದ್ದರೆ ಇನ್ನೊಂದು ಬದಿಯಲ್ಲಿ ವಟಪತ್ರಶಾಯಿ (ಅರಳೆಲೆಯ ಮೇಲೆ) ಕೃಷ್ಣನ ಚಿತ್ರವಿದೆ. ಕಬ್ಬಿಣದ ಕಂಭದ ನಡುವೆ ಇರುವ ನೆಲಹಾಸು ಅಮೃತಶಿಲೆಯಿಂದ ಕೂಡಿದ್ದು, ಬಳ್ಳಿಗಳ ವಿನ್ಯಾಸವು ಅರೆ ಪ್ರಶಸ್ತ ಹರಳುಗಳಿಂದ ತುಂಬಿವೆ. ಇದಲ್ಲದೆ ಈ ಸಭಾಂಗಣದಲ್ಲಿ ಮೈಸೂರಿನ ಪ್ರಸಿದ್ಧ ಚಿತ್ರಕಾರರಾದ ಕೆ. ವೆಂಕಟಪ್ಪನವರು ರಚಿಸಿದ ಮೂರು ಉಬ್ಬು ಶಿಲ್ಪಗಳಿವೆ.





ಈ ಸಭಾಂಗಣದ ಪಶ್ಚಿಮ ಭಾಗದಲ್ಲಿರುವ ಅಷ್ಟಕೋನಾಕೃತಿಯ ಮಂಟಪದಲ್ಲಿ ಚಿನ್ನದ ಸಿಂಹಾಸನವನ್ನು ಇಡಲಾಗುತ್ತದೆ. ದಸರಾ ಸಂದರ್ಭದಲ್ಲಿ ಮಹಾರಾಜರು ಖಾಸಗಿ ದರ್ಬಾರ್ ಮತ್ತು ಪೂಜಾ ವಿಧಿಗಳನ್ನು ಇಲ್ಲಿಂದ ನೆರವೇರಿಸುತ್ತಾರೆ.

## ಕಲ್ಯಾಣ ಮಂಟಪ

ನೆಲ ಅಂತಸ್ತಿನ ದಕ್ಷಿಣ ಭಾಗದಲ್ಲಿರುವ ಕಲ್ಯಾಣ ಮಂಟಪವನ್ನು ಮಹತ್ವದ ಸಮಾರಂಭಗಳಲ್ಲಿ ಬಳಸಲಾಗುತ್ತದೆ. ಅಷ್ಟಕೋನಾಕೃತಿಯ ಈ ಮಂಟಪದ ಮೇಲ್ಛಾವಣಿಯಲ್ಲಿ ವಿವಿಧ ವಿನ್ಯಾಸದಲ್ಲಿ ಬಣ್ಣದ ಗಾಜುಗನ್ನು ಜೋಡಿಸಲಾಗಿದೆ. ಪೂರ್ವ ಮತ್ತು ಪಶ್ಚಿಮ ದಿಕ್ಕಿನಿಂದ ಪ್ರವೇಶಿಸಬಹುದಾದ ಮಂಟಪದ ಇತರ ದಿಕ್ಕುಗಳ ಗೋಡೆಗಳಲ್ಲಿ ದಸರಾ ಆಚರಣೆಯ ಮತ್ತು ಧಾರ್ಮಿಕ ವಿಷಯಗಳ ಕುರಿತಾದ 26 ಬಣ್ಣದ ಚಿತ್ರಗಳಿವೆ (Murals).




## ಚಿನ್ನದ ಸಿಂಹಾಸನ

ಶ್ರೀರಂಗಪಟ್ಟಣದಲ್ಲಿದ್ದ ವಿಜಯನಗರದ ಕೊನೆಯ ರಾಜ ಪ್ರತಿನಿಧಿಯಿಂದ ಮೊದಲನೆಯ ರಾಜ ಒಡೆಯರ್ ಈ ಸಿಂಹಾಸನವನ್ನು ಪಡೆದರು. ಮೂಲತಃ ಔದುಂಬರ ಮರದಿಂದ ತಯಾರಿಸಲಾಗಿದ್ದು, ಆನೆ ದಂತದ ಕೆತ್ತನೆಗಳಿಂದ ಅಲಂಕರಿಸಲ್ಪಟ್ಟಿತ್ತು. ಬ್ರಿಟಿಷರು (ಆಂಗ್ಲರು) ಟಿಪ್ಪುವಿನ ಶೀರೋಪಕರಣಗಳ ಸಂಗ್ರಹ ಕೊಠಡಿಯಲ್ಲಿದ್ದ ಈ ಸಿಂಹಾಸನವನ್ನು ಕ್ರಿ.ಶ. 1799ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪಟ್ಟಾಭಿಷೇಕದ ಸಂದರ್ಭದಲ್ಲಿ ಬಳಸಿದರು. 1812–1814ರಲ್ಲಿ ಈ ಸಿಂಹಾಸಕ್ಕೆ ಚಿನ್ನ ಮತ್ತು ಬೆಳ್ಳಿಯ ಹೊದಿಕೆಯನ್ನು ತೊಡಿಸಲಾಯಿತು. ಇದರಲ್ಲಿ ಪುರಾಣೋಕ್ತ ಚಿತ್ರಗಳನ್ನು ಮೂಡಿಸಲಾಗಿತ್ತು. ನಂತರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸಿಂಹಾಸನವನ್ನು 1916–17ರಲ್ಲಿ ಸಂಪೂರ್ಣವಾಗಿ ನವೀಕರಿಸಿದರು. ದಂತದ ಭಾಗಗಳನ್ನು ಬದಲಿಸಿ, ಚಿನ್ನದ ಭಾಗಗಳನ್ನು ಅಳವಡಿಸಲಾಯಿತು. 1946ರಲ್ಲಿ ಸಿಂಹಾಸನವನ್ನು ಮತ್ತೆ ವಿಸ್ತರಿಸಲಾಯಿತು. ರಾಜವಂಶವು ಈ ಸಿಂಹಾಸನವನ್ನು ಬಹಳ ಪವಿತ್ರವೆಂದು ಪರಿಗಣಿಸಿದೆ ಮತ್ತು ದಸರಾ ಸಂದರ್ಭದಲ್ಲಿ ಮಾತ್ರ ಉಪಯೋಗಿಸಲಾಗುತ್ತದೆ. ಅಂಬಾವಿಲಾಸ ಸಭಾಂಗಣದಲ್ಲಿ ದಸರಾ ಉತ್ಸವ ಸಮಯದಲ್ಲಿ 15 ದಿನಗಳವರೆಗೆ ಸಿಂಹಾಸನ ಪ್ರದರ್ಶನದಲ್ಲಿರುತ್ತದೆ.



## ಚಿನ್ನದ ಅಂಬಾರಿ

ಮಂಟಪದಂತೆ ಇರುವ ಅಂಬಾರಿಯನ್ನು ಮರದಿಂದ ತಯಾರಿಸಲಾಗಿದ್ದು ಅಪಟ್ಟ ಚಿನ್ನದ ತಗಡನ್ನು ಹೊದಿಸಲಾಗಿದೆ. ಈ ತಗಡಿನಲ್ಲಿ ಹೂ ಬಳ್ಳಿಗಳು ಮತ್ತು ಎಲೆಗಳನ್ನು ಸ್ಥಳೀಯ ಕುಶಲಕರ್ಮಿಗಳು ಮೂಡಿಸಿದ್ದಾರೆ. ಇದರೊಂದಿಗಿರುವ ಎರಡು ಚಾಮರಗಳು ದಂತದ ಹಿಡಿಕೆ ಮತ್ತು ತುದಿಯು ಅನೇಕ ಬೆಳ್ಳಿಯ ದಾರಗಳಿಂದ ಕೂಡಿದ್ದು ಚಿನ್ನದ ಲೇಪನ ಹೊಂದಿದೆ.
ಈ ಅಂಬಾರಿಯಲ್ಲಿ ಮಹಾರಾಜರು ಮತ್ತು ಯುವರಾಜರು ಕುಳಿತು ವಿಜಯದಶಮಿಯ ದಿನ ಜಂಬೂ ಸವಾರಿಯಲ್ಲಿ ತೆರಳುತ್ತಿದ್ದರು. ವಿಜಯದಶಮಿ ಮೆರವಣಿಗೆಯಲ್ಲಿ ಮುಖ್ಯ ಆಕರ್ಷಣೇಯೇ ಜಂಬೂ ಸವಾರಿ. ಇಂದಿನ ದಿನಮಾನಗಳಲ್ಲಿ ದೇವಿ ಚಾಮುಂಡೇಶ್ವರಿಯ ವಿಗ್ರಹವನ್ನು ಅಂಬಾರಿಯಲ್ಲಿಟ್ಟು ಪೂಜಿಸಲಾಗುತ್ತಿದೆ.
ಈ ಅಂಬಾರಿಯನ್ನು ಅರಮನೆಯ ಗೊಂಬೆಗಳ ತೊಟ್ಟಿಯಲ್ಲಿ ನೋಡಬಹುದು.





## ಟಿಪ್ಪುವಿನ ಖಡ್ಗ

ಈ ಖಡ್ಗವನ್ನು ಜನರಲ್ ಆರ್ಥರ್ ವೆಲ್ಲೆಸ್ಲಿ (ನಂತರ ವೆಲ್ಲಿಂಗಟನ್‌ನ ಡ್ಯೂಕ್) ಅವರಿಗೆ ಕೊಡುಗೆಯಾಗಿ ನೀಡಲಾಗಿದ್ದನ್ನು ವಿಂಡ್ಸರ್ ಕ್ಯಾಸಲ್‌ನಲ್ಲಿ ಇಡಲಾಗಿತ್ತು. ಈ ಖಡ್ಗವನ್ನು 1938ರಲ್ಲಿ ನಾಲ್ಕನೆಯ ಚಾರ್ಲ್ಸ್, (ರಿಚ್‌ಮಂಡ್‌ನ ಡ್ಯೂಕ್) ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ನೀಡಿದರು. ಇದು ಅರಮನೆಯ ಹೆಮ್ಮೆಯ ಸಂಗ್ರಹಗಳಲ್ಲೊಂದು.

## ಅರಮನೆ ಆವರಣ ಮತ್ತು ಮೈದಾನ

ಅರಮನೆಯ ಮುಂಭಾಗದಲ್ಲಿ ವಿಶಾಲವಾದ ಮೈದಾನವಿದೆ. ಇಲ್ಲಿಗೆ ಬಂದು ಸೇರುವ ಪೂರ್ವ, ಉತ್ತರ ಮತ್ತು ದಕ್ಷಿಣ ಪಥಗಳ ಎರಡೂ ಕಡೆ ಇನ್ನೇನು ಆಕ್ರಮಣ ಮಾಡುವಂತೆ ತೋರುವ ಕಂಚಿನಿಂದ ತಯಾರಿಸಲಾದ ಹುಲಿಗಳ ಶಿಲ್ಪವನ್ನು ಕಾಣಬಹುದು. ಇನ್ನೊಂದು ಜೊತೆ ಹುಲಿಗಳು ಕಲ್ಯಾಣ ಮಂಟಪದ ಉತ್ತರಕ್ಕಿರುವ ಮೆಟ್ಟಿಲುಗಳ ರಕ್ಷಣೆಗೆ ಇರುವಂತೆ ಬಿಂಬಿಸಲು ಜೋಡಿಸಲಾಗಿದೆ.


ಅರಮನೆ ಆವರಣ ಮತ್ತು ಸುತ್ತಮುತ್ತಲಿನ ಇಕ್ಕಟ್ಟಾದ ಸ್ಥಳದಲ್ಲಿದ್ದ ಕಟ್ಟಡಗಳನ್ನು ಮತ್ತು ಪೇಟೆಯನ್ನು ಅರಮನೆಯ ಸೌಂದರ್ಯೀಕರಣಗೊಳಿಸಲು ಮತ್ತು ಹೆಚ್ಚು ಆಕರ್ಷಣೀಯವಾಗಿಡಲು 1914ರಲ್ಲಿ ನೆಲಸಮ ಮಾಡಲಾಯಿತು. ಉತ್ತರದ ಭಾಗವನ್ನು 1918ರಲ್ಲಿ ನಿರ್ಮಿಸಲಾಯಿತು. ಉತ್ತರದ ಎರಡು ಮಹಾದ್ವಾರಗಳಾದ ಬಲರಾಮ ಮತ್ತು ಜಯರಾಮ ಹಾಗೂ ಬದಿಯಲ್ಲಿರುವ ಪಹರೆಯವರ ಕೊಠಡಿಗಳನ್ನು 1915–16ರಲ್ಲಿ ನಿರ್ಮಿಸಲಾಯಿತು. ಸ್ವಲ್ಪ ಮಾರ್ಪಾಡುಗಳೊಂದಿಗೆ ದಕ್ಷಿಣದ





ಬಲರಾಮ ಮತ್ತು ಜಯರಾಮ ಮಹಾದ್ವಾರ

ಮಹಾದ್ವಾರವನ್ನು 1918ರಲ್ಲಿ ನಿರ್ಮಿಸಲಾಯಿತು. ಅರಮನೆ ಆವರಣ ಮತ್ತು ಮಹಾದ್ವಾರಗಳ ಅಭಿವೃದ್ಧಿಯ ಯೋಜನೆಯಲ್ಲಿ ಬೃಹತ್ತಾದ ಮತ್ತು ಎರಡೂ ಬದಿ ಆವಾರ ಹೊಂದಿದ ಭಾರತೀಯ–ಪರ್ಶಿಯನ್ ವಾಸ್ತು ಶೈಲಿಯ ಕಮಾನುಗಳುಳ್ಳ ದ್ವಾರವನ್ನು ನಿರ್ಮಿಸಲಾಯಿತು. ಮಹಾರಾಜರ ಕುದುರೆಯ ಹೆಸರನ್ನು ಈ ಮಹಾದ್ವಾರಕ್ಕೆ ಇಟ್ಟು ಜಯಮಾರ್ತಾಂಡ ಎಂದು ಕರೆಯಲಾಗಿದೆ. ಪಶ್ಚಿಮ ದಿಕ್ಕಿಗೆ ಇರುವ ಎರಡು ಮಹಾದ್ವಾರಗಳಲ್ಲಿ ಬ್ರಹ್ಮಪುರಿ ದ್ವಾರವು ಜಗನ್ಮೋಹನ ಆರ್ಟ್‌ಗ್ಯಾಲರಿ ಕಡೆಗೆ ತೆರೆದುಕೊಂಡರೆ, ಕರಿಕಲ್ಲು ತೊಟ್ಟಿ ದ್ವಾರವು ಮೈಸೂರು ನಗರಪಾಲಿಕೆ ಕಛೇರಿಯ ಕಡೆ ತೆರೆದುಕೊಳ್ಳುತ್ತದೆ.





ಜಯಮಾರ್ತಾಂಡ ಮಹಾದ್ವಾರ

# ಅರಮನೆ ಆವರಣದಲ್ಲಿರುವ ದೇವಾಲಯಗಳು

## ಲಕ್ಷ್ಮೀರಮಣ ದೇವಾಲಯ

ಕೋಟೆಯ ಪಶ್ಚಿಮ ಭಾಗದಲ್ಲಿ ಮಹಾರಾಜರ ಖಾಸಗಿ ನಿವಾಸದ ಹತ್ತಿರವಿರುವ ಈ ದೇವಾಲಯ ಕ್ರಿ.ಶ. 1497ರ ದಾನ ಶಾಸನವೊಂದರಲ್ಲಿ ಉಲ್ಲೇಖವಾಗಿದೆ. ಮುಖ್ಯ ದೇವರು ನಂಬಿನಾರಾಯಣ ಮತ್ತು ಇದರ ಬಲಗಡೆ ದೇವಕೋಷ್ಠದಲ್ಲಿ ಲಕ್ಷ್ಮಿ ಅಮ್ಮನವರ ಶಿಲ್ಪವಿದೆ. ಇಲ್ಲಿರುವ 4 ಅಡಿ ಎತ್ತರದ ವೇಣುಗೋಪಾಲ ವಿಗ್ರಹವನ್ನು ರಾಜಮನೆತನದವರು ಅತ್ಯಾದರ ಶ್ರದ್ಧೆಯಿಂದ ಪೂಜಿಸುತ್ತಾರೆ.

ಆವರಣದಲ್ಲಿರುವ 2 ಅಡಿ ಎತ್ತರದ ಭಕ್ತ ಶಿಲ್ಪವನ್ನು ಒಂದನೇ ರಾಜ ಒಡೆಯರ್ ಎಂದು ಗುರ್ತಿಸಲಾಗಿದೆ. ಅರಮನೆಯ ಪೂರ್ವ ಮಹಾದ್ವಾರದಿಂದ ಪ್ರವೇಶ ಮಾಡಿದಾಗ ಪಶ್ಚಿಮಾಭಿಮುಖವಾಗಿ ಬಲಗಡೆ ತ್ರಿನಯನೇಶ್ವರ ಮತ್ತು ಎಡಗಡೆ ವರಾಹಸ್ವಾಮಿ ದೇವಾಲಯಗಳಿವೆ.





## ತ್ರಿನಯನೇಶ್ವರ ದೇವಾಲಯ



ತ್ರಿನಯನೇಶ್ವರ ದೇವಾಲಯ ಆವರಣ ಗೋಡೆಯಿಂದ ಸುತ್ತುವರಿದು ಮತ್ತು ದ್ವಾರವನ್ನು ಹೊಂದಿದ ದ್ರಾವಿಡ ಶೈಲಿಯ ಈ ದೇವಾಲಯ ಕಂಠೀರವ ನರಸರಾಜ ಒಡೆಯರ್ (ಕ್ರಿ.ಶ. 1638–1659) ಮತ್ತು ಅವರ ಉತ್ತಾರಾಧಿಕಾರಿ ದೊಡ್ಡ ದೇವರಾಜ ಒಡೆಯರ್ (ಕ್ರಿ.ಶ. 1659–1673) ಕಾಲದಲ್ಲಿ ಜೀರ್ಣೋದ್ಧಾರಗೊಂಡಿದೆ. ಸುಖನಾಸಿಯ ಎಡಗಡೆ ದಕ್ಷಿಣಾಭಿಮುಖವಾದ ಕೊಠಡಿಯಲ್ಲಿ ತ್ರಿಬಿಂದು ಸ್ವಾಮಿಯವರ ಪ್ರತಿಮೆ ಇದೆ. ಇದನ್ನು ತ್ರಿನಯನೇಶ್ವರ ದೇವರಿಗೆ ಅಭಿಮುಖವಾಗಿ ಸ್ಥಾಪಿಸಲಾಗಿದೆ.

## ವರಾಹಸ್ವಾಮಿ ದೇವಾಲಯ

ದಿವಾನ್ ಪೂರ್ಣಯ್ಯನವರು 1809ರಲ್ಲಿ ಶಿವಮೊಗ್ಗ ಜಿಲ್ಲೆಯ ಹೊಯ್ಸಳ ಕಾಲದ ದೇವಾಲಯಗಳ ಅವಶೇಷಗಳನ್ನು ತರಿಸಿ ವರಾಹಸ್ವಾಮಿ ದೇವಾಲಯ ನಿರ್ಮಿಸಿದರು. ಮುಖ್ಯ ದೇವರು ಶ್ವೇತ ವರಾಹಸ್ವಾಮಿ. ಈ ವಿಗ್ರಹವನ್ನು ಚಿಕ್ಕದೇವರಾಜ ಒಡೆಯರ್ (ಕ್ರಿ.ಶ. 1672–1704) ಶ್ರೀರಂಗಪಟ್ಟಣದಲ್ಲಿ ಹೊಸದಾಗಿ ಕಟ್ಟಲಾದ ದೇವಾಲಯದಲ್ಲಿ ಸ್ಥಾಪಿಸಿದರು. ಟಿಪ್ಪು ಸುಲ್ತಾನ ದೇವಾಲಯದ ನೆಲಸಮಕ್ಕೆ ಆದೇಶಿಸಿದಾಗ ಸ್ಥಳೀಯ ಭಕ್ತರ ಸಮಯೋಚಿತ ಕಾರ್ಯದಿಂದ ವಿಗ್ರಹ ನಾಶವಾಗದೇ ಉಳಿಯಿತು. ಈ ವಿಗ್ರಹವನ್ನು ವಿಧಿ ವಿಧಾನಗಳನ್ನು ಅನುಸರಿಸಿ ಮೈಸೂರಿನ ಕೋಟೆ ಆವರಣದಲ್ಲಿ ನಿರ್ಮಿಸಲಾದ ದೇವಾಲಯದಲ್ಲಿ ಸ್ಥಾಪಿಸಲಾಗಿದೆ.



ಇದೇ ಆವರಣದಲ್ಲಿರುವ ಅಮ್ಮನವರ ದೇವಾಲಯದ ಮುಂದಿನ ದ್ವಾರ ಕೆತ್ತನೆಯಿಂದ ಕೂಡಿದೆ. ನವರಂಗದ ಇಕ್ಕೆಲಗಳಲ್ಲಿನ ಗೂಡುಗಳಲ್ಲಿ ಗಾರೆಶಿಲ್ಪಗಳಿವೆ. ವೈಷ್ಣವ ಗುರುಗಳಾದ ದೇಶಿಕರ್ (13–14ನೇ ಶತಮಾನ) ಮತ್ತು ಜೀಯರ್ (14–15ನೇ ಶತಮಾನ) ಪ್ರತಿಮೆಗಳಿವೆ. ದೇವಾಲಯದ ನವರಂಗ ಭಾಗದಲ್ಲಿ ಮತ್ತು ಆಗ್ನೇಯ ಗೋಡೆಯ ಮೇಲೆ ರಾಮಾಯಣ ಮತ್ತು ಭಾಗವತದ (murals) ಚಿತ್ರಗಳಿವೆ.

## ಕೋಡಿ ಭೈರವಸ್ವಾಮಿ ದೇವಾಲಯ

ಭೈರವ ರೂಪದ ಶಿವನ ಈ ದೇವಾಲಯ ಮೊದಲು ದೊಡ್ಡಕೆರೆ ಅಥವಾ ದೇವರಾಯಸಾಗರ ಕೆರೆಯ ಕೋಡಿಯ ಬಳಿ ಇದ್ದುದ್ದರಿಂದ ದೇವಾಲಯಕ್ಕೆ ಈ ಹೆಸರು ಬಂದಿತು. ಈಗ ಅರಮನೆಯ ಕೋಟೆ ಪಕ್ಕದಲ್ಲಿದೆ. ಸಣ್ಣ ದೇವಾಲಯವಾದರೂ ಮೈಸೂರಿನ ಇತಿಹಾಸದ ದೃಷ್ಟಿಯಿಂದ ಬಹಳ ಮಹತ್ವ ಪಡೆದಿದೆ. ಮೈಸೂರು ರಾಜ ವಂಶದ ಸ್ಥಾಪಕರಾದ ಯದುರಾಯ ಮತ್ತು ಕೃಷ್ಣರಾಯರು ರಾಜ ಪುರೋಹಿತರನ್ನು ಇಲ್ಲಿ ಭೇಟಿಯಾದರು. ಭೈರವ ವಿಗ್ರಹವು ಸುಮಾರು 1 ಮೀ ಎತ್ತರವಿದ್ದು ನಾಲ್ಕು ಕೈಗಳಲ್ಲಿ ತ್ರಿಶೂಲ, ಡಮರು, ಖಡ್ಗ ಮತ್ತು ಕತ್ತರಿಸಿದ ರುಂಡವಿದೆ. ಈ ವಿಗ್ರಹದ ಬಲಗಡೆ ಚಾಮರಧಾರಿಣಿಯ ಶಿಲ್ಪವಿದೆ. ಭೈರವ ವಿಗ್ರಹದ ಎಡಗಡೆ ಕುಡುಗೋಲನ್ನು ಬಲಗೈಯಲ್ಲಿ ಎತ್ತಿಹಿಡಿದ ಭದ್ರಕಾಳಿಯ ಶಿಲ್ಪವಿದೆ.



## ಕೋಡಿ ಸೋಮೇಶ್ವರಸ್ವಾಮಿ ದೇವಾಲಯ

ಅರಮನೆ ಕೋಟೆಯ ಈಶಾನ್ಯ ಭಾಗದಲ್ಲಿ ಕೋಡಿ ಸೋಮೇಶ್ವರಸ್ವಾಮಿಯ ದೇವಾಲಯವಿದೆ. ಕಂಠೀರವ ನರಸರಾಜ ಒಡೆಯರ್ 1399ರಲ್ಲಿ ಈ ದೇವಾಲಯವನ್ನು ನಿರ್ಮಿಸಿದರು. ಈ ದೇವಾಲಯದ ಸುತ್ತಲೂ ಅನೇಕ ದೇವರ ವಿಗ್ರಹಗಳಿವೆ ಮತ್ತು ಮುಂಭಾಗದಲ್ಲಿ ಬನ್ನಿ ಮರವಿದೆ.



## ಖಿಲ್ಲೆ ವೆಂಕಟರಮಣಸ್ವಾಮಿ ದೇವಾಲಯ

ಟಿಪ್ಪುವಿನ ಆಳ್ವಿಕೆಯ ಕಾಲದಲ್ಲಿ ಮೈಸೂರು ರಾಜವಂಶವು ಶ್ರೀರಂಗಪಟ್ಟಣದಲ್ಲಿಯೇ ಇತ್ತು. ಇಮ್ಮಡಿ ಕೃಷ್ಣರಾಜ ಒಡೆಯರ್‌ರವರ ಪತ್ನಿ ರಾಣಿ ಲಕ್ಷ್ಮಮ್ಮಣ್ಣಿಯವರು ರಾಜವಂಶದ ಬಗ್ಗೆ ಚಿಂತಿತರಾಗಿದ್ದರು. ವೆಂಕಟರಮಣ ಸ್ವಾಮಿಯು ಅವರ ಸ್ವಪ್ನದಲ್ಲಿ ಬಂದು ಬಲಮುರಿಯಲ್ಲಿರುವ ತನ್ನ ವಿಗ್ರಹವನ್ನು ಮೈಸೂರಿನಲ್ಲಿ



ಸ್ಥಾಪಿಸಿದರೆ ವಂಶಕ್ಕೆ ಪುನಃ ಅಧಿಕಾರ ಲಭಿಸುವುದಾಗಿ ಆದೇಶಿಸಲಾಗಿ ಟಿಪ್ಪುವಿಗೆ ತಿಳಿಯದಂತೆ ಬಲಮುರಿಗೆ ಹೋಗಿ ವೆಂಕಟರಮಣ ವಿಗ್ರಹವನ್ನು ಮೈಸೂರಿಗೆ ತಂದು ದೇವಾಲಯದಲ್ಲಿ ಪ್ರತಿಷ್ಠಾಪಿಸಿ ಪೂಜೆ ಪ್ರಾರಂಭಿಸುತ್ತಾರೆ. ಈ ಕಾರ್ಯ ಮೈಸೂರು ಅರಸು ವಂಶಕ್ಕೆ ಸಹಕಾರಿಯಾಗಿ ಟಿಪ್ಪುವಿನ ಪತನಾನಂತರ ರಾಜ್ಯಾಧಿಕಾರವು ಒಡೆಯರ್ ವಂಶಕ್ಕೆ ಪುನಃ ಲಭಿಸಿತು.

## ಶ್ರೀ ಕೋಟೆ ಆಂಜನೇಯಸ್ವಾಮಿ ದೇವಾಲಯ

ಅರಮನೆ ಕೋಟೆಯ ಉತ್ತರ ಮಹಾದ್ವಾರದ ಬಳಿ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಾಲಯವಿದೆ. ರಾಮನ ಪರಮ ಭಕ್ತನಾದ ಆಂಜನೇಯಸ್ವಾಮಿಯು ಕೇಸರಿ ಬಣ್ಣದಿಂದ ಅಲಂಕೃತನಾಗಿದ್ದು ಉತ್ತರಾಭಿಮುಖವಾಗಿದೆ. ಈ ವಿಗ್ರಹವನ್ನು ಮಂಡ್ಯ ಜಿಲ್ಲೆಯ ಬೆಳ್ಗೊಳದಿಂದ ತರಲಾಗಿದೆಯಂದು ಹೇಳಲಾಗುತ್ತದೆ.





## ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ

ಮೈಸೂರು ರಾಜವಂಶವು ಮಹಾಭಾರತದ ಶ್ರೀ ಕೃಷ್ಣನ ಕಾಲದಲ್ಲಿ ಯದುವಂಶವೆಂದು ಪ್ರಾರಂಭವಾಯತು. ಮುಮ್ಮಡಿ ಕೃಷ್ಣರಾಜ ಒಡೆಯರ್ ಕೃಷ್ಣನಿಗೆ ಸಂಬಂಧಿಸಿದ ದೇವಾಲಯದ ಇಲ್ಲದ್ದುದ್ದನ್ನು ಗಮನಿಸಿ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯ ನಿರ್ಮಾಣವನ್ನು 1825ರಲ್ಲಿ ಪ್ರಾರಂಭಗೊಳಿಸಿ 1829ರಲ್ಲಿ (ಶಾಸನ ಉಲ್ಲೇಖದಂತೆ) ಪೂರ್ಣಗೊಳಿಸಿದರು.



ಗರ್ಭಗೃಹದಲ್ಲಿ ಹಸಿರು ಕಣ ಶಿಲೆಯ ಅಂಬೆಗಾಲಿನ ಕೃಷ್ಣ ವಿಗ್ರಹವಿದೆ. ವಿಗ್ರಹವು ಮಗುವಿನ ಮಂದಹಾಸದಿಂದ ಕೂಡಿದ್ದು ಬೆಣ್ಣೆ ಮುದ್ದೆಯನ್ನು ಕೈಯಲ್ಲಿ ಹಿಡಿದಿದೆ. ಈ ದೇವಾಲಯ ನಿರ್ಮಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತವರ ಪತ್ನಿಯರ ಪ್ರತಿಮೆಗಳಿಗೆ ನಿತ್ಯಪೂಜೆ ನಡೆಯುತ್ತದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಈ ದೇವಾಲಯಕ್ಕೆ ಅನೇಕ ದಾನಗಳನ್ನು ನೀಡಿದ್ದಾರೆ ಮತ್ತು ದೇವ, ದೇವತೆಗಳ, ಋಷಿ ಮತ್ತು ಮುನಿಗಳ ಕಂಚಿನ ವಿಗ್ರಹಗಳನ್ನು ನೀಡಿದ್ದಾರೆ. ಪ್ರತಿ ವಿಗ್ರಹಕ್ಕೆ ಅವರ ಹೆಸರನ್ನು ಕೆತ್ತಲಾಗಿದೆ.

ದೇವಾಲಯದ ಹೊರಭಾಗದಲ್ಲಿ ಅತ್ರಿಮುನಿಯ ವಿಗ್ರಹವಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ಅವರ ವಂಶಸ್ಥರು ಹಾಗೂ ದೇವಾಲಯದ ಪ್ರಥಮ ಅರ್ಚಕರು ಅತ್ರೇಯ ಗೋತ್ರಕ್ಕೆ ಸೇರಿದವರಾಗಿದ್ದ ಕಾರಣ ಈ ವಿಗ್ರಹ ಸ್ಥಾಪಿಸಲಾಗಿದೆಯೆಂದು ನಂಬಲಾಗಿದೆ. ವರಹಾಸ್ವಾಮಿ ದೇವಾಲಯದಂತೆ ಇಲ್ಲಿನ ನವರಂಗದಲ್ಲಿ ವರ್ಣಚಿತ್ರಗಳಿವೆ. ಭಾಗವತ ಕಥೆಗಳನ್ನು ವರ್ಣಚಿತ್ರಗಳಲ್ಲಿ ಬಿಂಬಿಸಲಾಗಿದೆ. ಈ ದೇವಾಲಯದ ಮತ್ತು ವರಾಹಸ್ವಾಮಿ ದೇವಾಲಯಗಳಲ್ಲಿನ ವರ್ಣ ಚಿತ್ರಗಳು 19ನೇ ಶತಮಾನದ ಮೈಸೂರು ಶೈಲಿಯ ಚಿತ್ರಗಳಾಗಿವೆ.



## ಆತ್ಮ ವಿಲಾಸ ಗಣೇಶ

ಆತ್ಮ ವಿಲಾಸ ಗಣೇಶ ದೇವಾಲಯ ಅರಮನೆ ಆವರಣದಲ್ಲಿರುವ ಪ್ರಾಚೀನ ದೇವಾಲಯ. 1897ರಲ್ಲಿನ ಅಗ್ನಿ ಆಕಸ್ಮಿಕದಲ್ಲಿ ಅರಮನೆಯ ಮರದ ಭಾಗವು ನಾಶವಾದಾಗ ಈ ದೇವಾಲಯ ಏನೂ ಹಾನಿಯಾಗದೇ ಹಾಗೆ ಉಳಿದಿತ್ತು. ಅರಮನೆಯ ಪುನರ್ ನಿರ್ಮಾಣದ ಸಮಯದಲ್ಲಿ ಈ ದೇವಾಲಯವನ್ನು ಒಳಗೊಂಡಂತೆ ಅರಮನೆ ವಿನ್ಯಾಸದಲ್ಲಿ ಸೇರಿಸಲಾಗಿದೆ. ಬೀಟಿ ಮರದಿಂದ ಮಾಡಲಾಗಿರುವ ದೇವಾಲಯದ ದ್ವಾರ ಬಾಗಿಲಿನಲ್ಲಿ ದಂತದ ಕುಸುರಿ ಕೆಲಸವಿದೆ. ಅರಮನೆಯ ದರ್ಬಾರ್ ಸಭಾಂಗಣವನ್ನು ಅಂಭಾವಿಲಾಸ ಅರಮನೆಯನ್ನು ಜೋಡಿಸುವ ತೆರೆದ ಆವರಣದ ಮೂಲಕ ಈ ದೇವಾಲಯವನ್ನು ಪ್ರವೇಶಿಸಬಹುದು. ಇದಲ್ಲದೇ ವಾಹನ ಪ್ರವೇಶ ದ್ವಾರದಿಂದ ಸ್ಪೈರಲ್ (spiral) ಮೆಟ್ಟಿಲು ಮುಖಾಂತರವೂ ಪ್ರವೇಶಿಸಬಹುದು. ಐತಿಹ್ಯದಂತೆ ಗಾರೆಯ ಈ ಗಣೇಶನ ವಿಗ್ರಹವು 300 ಪುಣ್ಯಕ್ಷೇತ್ರಗಳಿಂದ ತಂದ 450 ಸಾಲಿಗ್ರಾಮಗಳನ್ನು ಹೊಂದಿದೆ.

## ಶ್ರೀ ಭುವನೇಶ್ವರಿ ದೇವಾಲಯ

ಶ್ರೀ ಭುವನೇಶ್ವರಿ ದೇವಾಲಯವು ದಕ್ಷಿಣದಲ್ಲಿನ ವರಾಹಸ್ವಾಮಿ ದೇವಾಲಯದ ಪ್ರಧಾನ ಅಕ್ಷಿಯ ಮೇಲೆ ಉತ್ತರದಿಕ್ಕಿನಲ್ಲಿದ್ದು ಸಾಮ್ಯತೆಯಿಂದ ಕೂಡಿದೆ. 1951ರಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಈ ದೇವಾಲಯವನ್ನು ನಿರ್ಮಿಸಿದರು. ದೇವಾಲಯ ಗೋಪುರವು ದ್ರಾವಿಡ ಶೈಲಿಯಲ್ಲಿದೆ. ಮೈಸೂರಿನ ಪ್ರಸಿದ್ಧ ಶಿಲ್ಪಿ-ವಾಸ್ತು ಶಾಸ್ತ್ರಜ್ಞ ಸಿದ್ಧಲಿಂಗಸ್ವಾಮಿಯವರು ಭುವನೇಶ್ವರಿ ದೇವಿಯ ವಿಗ್ರಹವನ್ನು ರೂಪಿಸಿದ್ದಾರೆ. ಇವಲ್ಲದೇ ಈ ದೇವಾಲಯದಲ್ಲಿರುವ ಸೂರ್ಯ, ಮಹಾವಿಷ್ಣು, ಮಹೇಶ್ವರ, ರಾಜರಾಜೇಶ್ವರ, ಗಣಪತಿ ಮತ್ತು ಚಾಮುಂಡೇಶ್ವರಿ ವಿಗ್ರಹಗಳನ್ನು ಕೆತ್ತಿದ್ದಾರೆ. ಈ ಆವರಣದಲ್ಲಿರುವ ತಾಮ್ರದ ಸೂರ್ಯ ಮಂಡಲವನ್ನು ಅರಮನೆಯಿಂದ ಇಲ್ಲಿಗೆ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸ್ಥಳಾಂತರಿಸಿದರು.

## ಶ್ರೀ ಗಾಯತ್ರಿ ದೇವಾಲಯ

ಅರಮನೆ ಕೋಟೆಯ ಆಗ್ನೇಯ ಭಾಗದಲ್ಲಿ ತ್ರಿನಯನೇಶ್ವರ ದೇವಾಲಯದ ಅಕ್ಷಿಯಲ್ಲಿ ಗಾಯತ್ರಿ ದೇವಾಲಯ ನಿರ್ಮಿಸಲಾಗಿದೆ. 1953ರಲ್ಲಿ ಜಯಚಾಮರಾಜ ಒಡೆಯರ್ ಈ ದೇವಾಲಯ ನಿರ್ಮಿಸಿದರು. ಈ ದೇವಾಲಯದಲ್ಲಿ ಸಾವಿತ್ರಿ, ಗಾಯತ್ರಿ ಮತ್ತು ಲಕ್ಷ್ಮಿಯ ವಿಗ್ರಹಗಳಿವೆ. ನವರಂಗದಲ್ಲಿ ಗಣೇಶ, ಸೂರ್ಯ ಮತ್ತು ಮಹಾವಿಷ್ಣುವಿನ ಶಿಲ್ಪಗಳಿವೆ ಇವುಗಳನ್ನು ಮೈಸೂರಿನ ಪ್ರಸಿದ್ಧ ಶಿಲ್ಪಿ ಸಿದ್ಧಲಿಂಗಸ್ವಾಮಿಯವರು ಕೆತ್ತಿದ್ದಾರೆ.





# ಇತರ ದೇವಾಲಯಗಳು ಮತ್ತು ಪೂಜಾ ಸ್ಥಳಗಳು

## ಜೈನ ದೇವಾಲಯ

ಶಾಂತೀಶ್ವರ ಬಸಿದಿಯೆಂದು ಕರೆಯಲಾಗುವ ಈ ಬಸದಿ ಅಲ್ಲಿನ ವಿಗ್ರಹಗಳ ಪೀಠದಲ್ಲಿರುವ ಶಾಸನಗಳ ಪ್ರಕಾರ ಸುಮಾರು 18ನೇ ಶತಮಾನಕ್ಕೆ ಸೇರುತ್ತದೆ. ಇಲ್ಲಿರುವ ಭಂಡಾರದ ಕೆಲವು ವಸ್ತುಗಳ ಮೇಲೂ ಶಾಸನಗಳಿವೆ. ಒಂಭತ್ತನೆಯ ಚಾಮರಾಜ ಒಡೆಯರ್ (ಕ್ರಿ.ಶ. 1776–1796)ರವರ ಪತ್ನಿ ದೇವಿರಮ್ಮಣ್ಣಿಯವರು ಕೆಲವು ಭಂಡಾರದ ವಸ್ತುಗಳನ್ನು ನೀಡಿದ್ದಾರೆ. ಶಾಂತೀಶ್ವರ ತೀರ್ಥಂಕರ ವಿಗ್ರಹವಲ್ಲದೆ ಸಾರವಾಹನ ಯಕ್ಷ, ಯಕ್ಷಿ, ಕೂಷ್ಮಾಂಡಿನಿ ವಿಗ್ರಹಗಳಿವೆ. ಲೋಹದ ಅನಂತನಾಥ ವಿಗ್ರಹವೂ ಇಲ್ಲಿದೆ.







## ಮಸೀದಿ

ಚಾಮರಾಜ ಜೋಡಿ ರಸ್ತೆಯಲ್ಲಿರುವ (Double Road) ಮಸಜಿದ್–ಎ–ನವಾಬ್ ಸಾಹಿಬ್ ಮೈಸೂರು ನಗರದ ಅತಿ ಹಳೆಯ ಮಸೀದಿ. ನಗರದ ಮಧ್ಯಭಾಗದಲ್ಲಿ ಶಿವರಾಮ ಪೇಟೆಯಲ್ಲಿ ಹಾಲನ್ ಮೊಯಿಮ್ ಮಸೀದಿ ಇದೆ. ಲಷ್ಕರ್ ಮೊಹಲ್ಲಾದಲ್ಲಿರುವ ಬಡಿ ಮಸೀದಿಯು ಆಕರ್ಷಕ ಕಟ್ಟಡವಾಗಿದೆ.



## ಸಂತ ಫಿಲೋಮಿನಾ ಚರ್ಚ್

ದಕ್ಷಿಣ ಭಾರತದಲ್ಲೆ ಅದ್ವಿತೀಯ ಕಟ್ಟಡ ಸಂತ ಫಿಲೋಮಿನಾ ಚರ್ಚ್ (1933). ಇದು ಗೋಥಿಕ್ ಶೈಲಿಯ ನಿರ್ಮಾಣವಾಗಿದೆ. ಮುಖ್ಯ ಸಭಾಂಗಣದಲ್ಲಿ 800ಕ್ಕೂ ಹೆಚ್ಚು ಭಕ್ತರು ಸೇರಬಹುದು. ವೇದಿಕೆಯ ಹಿನ್ನೆಲೆಯಲ್ಲಿ ಕಲ್ಲು ಕಮಾನಿನಲ್ಲಿ ಕಿಟಕಿಗಳಿವೆ ಮತ್ತು ಮೇಲೇರಿದಂತೆ ಕಿರಿದಾಗುವ ಕಮಾನುಗಳಿವೆ. ಟಿ.ಪಿ. ಇಸ್ಸಾರ್ ಹೇಳುವಂತೆ "ಸಂಯುಕ್ತ ಸ್ಥಂಭಗಳನ್ನು ಭೇದಿಸುವ ಕೊರಿಂಥಿಯನ್ ಮಾದರಿಯ ಜೋಡಿಗಗಳು, ವಿಶಾಲ ಕಮಾನುಗಳು, ಮತ್ತು ಇವುಗಳಿಂದ ಚಿಮ್ಮುವ ಮಾಳಿಗೆಯ ಎತ್ತರವು ನೆಲಹಾಸಿನಿಂದ 55 ಎತ್ತರದಲ್ಲರುವುದು ಅದ್ವಿತೀಯ."

ಮಹಾರಾಜ ಕೃಷ್ಣರಾಜ ಒಡೆಯರ್ ಇದರ ಶಂಕುಸ್ಥಾಪನೆಯನ್ನು 1933ರಲ್ಲಿ ನೆರವೇರಿಸಿದರು. ಫ್ರೆಂಚ್‌ವಾಸ್ತು ಶಿಲ್ಪಿ ವಿನ್ಯಾಸಗೊಳಿಸಿದ ಈ ಚರ್ಚ್ ನಿಜಕ್ಕೂ ಸುಂದರವಾಗಿದೆ. ಸಂತ ಫಿಲೋಮಿನಾರ ಸುಂದರ ಪುತ್ಥಳಿಯನ್ನು (3ನೇ ಶತಮಾನದ ಗ್ರೀಕ್ ಸಂತ) ಸಭಾಂಗಣದಲ್ಲಿನ ವೇದಿಕೆಯಲ್ಲಿ ಇರಿಸಲಾಗಿದೆ. ಇದನ್ನು ಫ್ರಾನ್ಸ್‌ನಿಂದ ತರಲಾಗಿದೆ. ಎರಡೂ ಬದಿಗಳಲ್ಲಿರುವ ಚಿತ್ತಾರದ ಗಾಜಿನ ಕಿಟಕಿಗಳಲ್ಲಿ ಜ್ಞಾನಸ್ನಾನ (Baptism), ಕೊನೆಯ ಉಪವಾಸ, ಸಾವಿನ ದ್ವಾರಗಳನ್ನು ದೇವರು ಭಂಗಿಸುತ್ತಿರುವುದು ಮತ್ತು ಶಿಲುಬೆಗೇರುವ ಜೀಸಸ್‌ನ ಚಿತ್ರಗಳಿವೆ. ಚರ್ಚ್‌ನ ಮುಂಭಾಗದಲ್ಲಿನ ಅವಳಿ ಗೋಪುರಗಳು 175 ಅಡಿ ಎತ್ತರ ಇವೆ.

ಫ್ರಾನ್ಸ್‌ನ ಮಾಗನಾನೂದಿಂದ ತಂದಿರುವ ಸಂತ ಫಿಲೋಮಿನಾರ ಮೂಳೆ ತುಂಡು ಮತ್ತು ಅವರು ಬಳಸುತ್ತಿದ್ದ ಬಟ್ಟೆಯನ್ನು ಇಲ್ಲಿ ಕಾಪಾಡಲಾಗಿದೆ.





# ಅದ್ಭುತ ದಸರಾ ಉತ್ಸವ

## ಈ ಹಿಂದಿನ ದಸರಾ ಉತ್ಸವ

ವಿಜಯನಗರ ಅರಸರ ಶ್ರೀರಂಗಪಟ್ಟಣದ ಪ್ರತಿನಿಧಿ ಶ್ರೀರಂಗರಾಯನಿಂದ ಮೈಸೂರು ವಂಶದ ಒಂದನೆಯ ರಾಜ ಒಡೆಯರ್ (ಕ್ರಿ.ಶ. 1578–1617, ಒಂಭತ್ತನೆಯ ರಾಜ) ರಲ್ಲಿ ಶ್ರೀರಂಗಪಟ್ಟಣದ ಸಿಂಹಾಸನವನ್ನು ಪಡೆಯುವುದರೊಂದಿಗೆ ಕ್ರಿ.ಶ. 1610ರಲ್ಲಿ ದಸರಾ ಉತ್ಸವ ಪ್ರಾರಂಭವಾಯಿತು. ಹತ್ತು ದಿನಗಳ ಈ ಉತ್ಸವ ಮಹಾಲಯ ಅಮಾವಾಸ್ಯೆಯ ನಂತರ ಬರುವ ಅಶ್ವೀಜದಂದು ಪ್ರಾರಂಭವಾಗುತ್ತದೆ (ಸೆಪ್ಟಂಬರ್ ಅಥವಾ ಅಕ್ಟೋಬರ್ ತಿಂಗಳು). ವಿಜಯದಶಮಿ ದಸರೆಯ ಹತ್ತನೆಯ ದಿನ. ಹಿಂದಿನ ಒಂಭತ್ತು ರಾತ್ರಿಗಳನ್ನು ನವರಾತ್ರಿ ಎಂದು ಕರೆಯುತ್ತಾರೆ.



ಮೈಸೂರಿನಲ್ಲಿ ದಸರಾ ಉತ್ಸವವನ್ನು ಶಿವನ ಪತ್ನಿಯಾದ ಪಾರ್ವತಿಯು ಚಾಮುಂಡಿಯ ಅವತಾರ ತಾಳಿ ಮಹಿಷಾಸುರನನ್ನು ವಧಿಸಿದ ನೆನಪಿಗಾಗಿ ಮತ್ತು ಚಂಡ – ಮುಂಡರೆಂಬ ರಾಕ್ಷಸರನ್ನು ಮತ್ತು ಇತರರನ್ನು ವಧಿಸಿದ ಕುರುಹಾಗಿ ಚಾಮುಂಡಿ ದೇವಿಯನ್ನು ಪ್ರತಿಷ್ಠಾಪಿಸಿ ಆಚರಿಸಲಾಗುತ್ತಿತ್ತು.

ಸರ್ಕಾರವು ದಸರಾ ಉತ್ಸವವನ್ನು ನಾಡಹಬ್ಬವೆಂದು ಘೋಷಿಸಿರುವುದು ಮಹತ್ವವಾಗಿದೆ. ಅಶ್ವೀಜ ಮಾಸದಲ್ಲಿ ರೈತರ ಫಸಲು ಮಾಗಿರುತ್ತದೆ. ಈ ಸಂದರ್ಭವು ಉತ್ತಮ ಫಸಲನ್ನು ನೀಡಿದ ದೇವನಿಗೆ ವಂದಿಸುವ / ಕೃತಜ್ಞತೆಯಿಂದ ನಮಿಸುವ ಸಮಯ. ತನ್ನ ಪ್ರಜೆಗಳಿಗೆ ಮತ್ತು ದೇಶಕ್ಕೆ ಸಂಪತ್ತನ್ನು ನೀಡಿದ ದೇವತೆಗಳಿಗೆ ವಂದಿಸುವುದು ರಾಜನ ಕರ್ತವ್ಯವೂ ಆಗಿದೆ. ಇದು ಆಧ್ಯಾತ್ಮಿಕ ಮಹತ್ವವನ್ನು ಸೂಚಿಸುತ್ತದೆ. ಇದಲ್ಲದೇ ಸೈನ್ಯದ ಮಹತ್ವವನ್ನು ಕೂಡಾ ಈ ಹಬ್ಬವು ಮನವರಿಕೆ ಮಾಡುತ್ತದೆ. ಉತ್ಸವದ ಕೊನೆಯ ದಿನವನ್ನು ವಿಜಯದಶಮಿ ಎಂದು ಕರೆಯಲಾಗುತ್ತಿದ್ದು ಹೆಸರೇ ಹೇಳುವಂತೆ ಈ ಹಬ್ಬ ದುಷ್ಟ ಶಕ್ತಿಯ ಮೇಲೆ ಶಿಷ್ಟ ಶಕ್ತಿಯ






ವಿಜಯದ ಸಂಕೇತ. ಆಧುನಿಕತೆ ಮತ್ತು ಪ್ರಾಚೀನತೆಯ ಮಿಶ್ರಣದ ಈ ಹಬ್ಬ ಪರಂಪರೆ ಮತ್ತು ಬದಲಾವಣೆಯ ಸಂಕೇತ. ಈ ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಲ್ಲ ಜಾತಿಗಳ ಸೌಹಾರ್ದತೆಯನ್ನು ಕಾಣಬಹುದು. ರಾಜನು ಈ ಸಂದರ್ಭದಲ್ಲಿ ತನ್ನ ವಿರುದ್ಧ ಸೆಣಸುತ್ತಿರುವ ಅಧೀನಕ್ಕೆ ಒಳಪಡದ ಸಾಮಂತರನ್ನು, ಉತ್ಸಾಹಿ ಮತ್ತು ಶಕ್ತಿಶಾಲಿ ನೆರೆಹೊರೆಯ ರಾಜರ ವಿರುದ್ಧ ದಿಗ್ವಿಜಯಕ್ಕೆ ಸೈನ್ಯದೊಂದಿಗೆ ಹೊರಡುತ್ತಿದನು.

ಉತ್ಸವದ ಸಂದರ್ಭದಲ್ಲಿ ಆಚರಿಸುತ್ತಿದ್ದ ವಿವಿಧ ಆಚರಣೆಯ ವಿವರಗಳು ದಸರಾ ಹೇಗಿತ್ತೆಂದು ಅರಿಯಲು ಸಹಾಯಕವಾಗಿದೆ. 1936ರಲ್ಲಿನ ವಿವರಣೆ ಹೀಗಿದೆ:

ಹತ್ತನೆಯ ದಿನ ಮಹಾರಾಜರು ವೈಭಯುತ ಮೆರವಣಿಗೆಯಲ್ಲಿ ಬನ್ನಿ ಮಂಟಪಕ್ಕೆ ಹೊರಡುತ್ತಿದ್ದರು. ಇದು ನಗರದ ಉತ್ತರ ದಿಕ್ಕಿನಲ್ಲಿ ಸ್ವಲ್ಪ ದೂರವಿದೆ. ಅಂದು ಬೆಳಿಗ್ಗೆ ಪಟ್ಟದ ಕತ್ತಿಯನ್ನು ಪಲ್ಲಕ್ಕಿಯಲ್ಲಿರಿಸಿ, ಪಟ್ಟದ ಆನೆ ಮತ್ತು ಪಟ್ಟದ ಕುದುರೆಯನ್ನು ಬನ್ನಿ ಮಂಟಪಕ್ಕೆ ಕಳುಹಿಸಲಾಗುತ್ತದೆ. ಮಧ್ಯಾಹ್ನ ಪ್ರಾರಂಭವಾದ ವೈಭವದ ಬೃಹತ್ ಮೆರಣಿಗೆ ಸಂಚರಿಸುವ ರಸ್ತೆಯ ಇಕ್ಕೆಲುಗಳಲ್ಲಿ ಜನ ಜಂಗುಳಿ ಸೇರಿರುತ್ತದೆ. ಗಂಭೀರ ಆನೆಯ ಮೇಲೆ ಇರುವ ಚಿನ್ನದ ಅಂಬಾರಿಯಲ್ಲಿ ಮಹಾರಾಜರು ಆಸೀನರಾಗಿರುತ್ತಾರೆ. ಬನ್ನಿ ಮಂಟಪದ ಹತ್ತಿರ ಮೆರವಣಿಗೆ ಬರುವ ಸಮಯಕ್ಕೆ ಸಂಜೆಯಾಗಿರುತ್ತದೆ. ಮಹಾರಾಜರು ಪಟ್ಟದ ಕತ್ತಿ ಮತ್ತು ಬನ್ನಿ ಮರಕ್ಕೆ ಪೂಜೆ ಸಲ್ಲಿಸುತ್ತಾರೆ. ಆನಂತರ ಪಟ್ಟದ ಕತ್ತಿ, ಆನೆ ಮತ್ತು



ಕುದುರೆಯನ್ನು ಅರಮನೆಗೆ ಹಿಂತಿರುಗಿ ಕಳುಹಿಸಲಾಗುತ್ತದೆ. ಆನಂತರ ಮಹಾರಾಜರು ಪಂಜಿನ ಬೆಳಕಿನಲ್ಲಿ ಮತ್ತೆ ಮೆರವಣಿಗೆಯಲ್ಲಿ ಅರಮನೆಗೆ ಹಿಂದಿರುಗುತ್ತಾರೆ. ಟಾರ್ಚ್‌ಲೈಟ್ ಪೆರೇಡ್ ಎಂದು ಕರೆಯುವ ಈ ಕಾರ್ಯಕ್ರಮಕ್ಕೆ ಇಂದು ಅಲಂಕೃತ ವಿದ್ಯುತ್ ದೀಪಗಳು ಟಾರ್ಚ್ ಲೈಟ್‌ಗಳಾಗಿವೆ.

## ದಸರಾ ಉತ್ಸವ ಇಂದು

ಜನಮನ್ನಣೆಗಳಿಸಿರುವ ದಸರಾ ಉತ್ಸವ ಇಂದು ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಇಂದಿಗೂ ಉತ್ಸವವನ್ನು ಪಾರಂಪರಿಕ ವಿಧಿ ವಿಧಾನಗಳಂತೆ ಅದ್ಧೂರಿಯಾಗಿ ಎಲ್ಲಾ ಉತ್ಸಾಹದೊಂದಿಗೆ ಆಚರಿಸಲಾಗುತ್ತಿದೆ.

ಪ್ರಮುಖ ಆಚರಣೆಯಾದ ಜಂಬೂ ಸವಾರಿಯಿಂದ ರಾಜಮನೆತನವು ಹಿಂದೆ ಸರಿದರೂ ಭಾರತ ಸ್ವಾತಂತ್ರ್ಯ ಪಡೆದ (1947) ನಂತರವೂ ದಸರಾ ಅಚರಣೆಯು ಹಿಂದಿನಂತೆ ನಡೆದು ಬಂದಿತ್ತು. ಆದರೆ 1969ರಲ್ಲಿ ಈ ಆಚರಣೆಯನ್ನು ನಿಲ್ಲಿಸಲಾಯಿತು. ನಂತರ ರಾಜ್ಯ ಸರ್ಕಾರವು "ಜನತಾ ದಸರಾ" ಆಚರಿಸುತ್ತಿದೆ. ಇದರಿಂದಾಗಿ ಆಚರಣೆಯ ಯಾವ ಮಹತ್ವವೂ ಕಡಿಮೆಯಾಗಿಲ್ಲ.

ವಿಜಯದಶಮಿಯಂದು ಅಲಂಕರಿಸಿದ ಆನೆಯ ಮೇಲಿರಿಸಿದ ಚಿನ್ನದ ಅಂಬಾರಿಯಲ್ಲಿ ದೇವಿ ಚಾಮುಂಡೇಶ್ವರಿಯ ವಿಗ್ರಹವನ್ನು ಪೂಜಿಸಿ, ನಂತರ ಹೊರಡುವ ಮೆರವಣಿಗೆಯು ಇಂದಿಗೂ ದೇಶ ವಿದೇಶಗಳಿಂದ ಜನರನ್ನು ಮೈಸೂರಿಗೆ ಆಕರ್ಷಿಸುತ್ತಿದೆ.





ವರ್ಷಗಳು ಕಳೆದಂತೆ ಧಾರ್ಮಿಕ ಆಚರಣೆಗಳು ಹಿಂದೆ ಸರಿದರೆ. ಹಬ್ಬದ ವಾತಾವರಣ ಹೆಚ್ಚಿ ಸಾಂಸ್ಕೃತಿಕ, ಜ್ಞಾನವೃದ್ಧಿಸುವ, ಸಾಮಾಜಿಕ–ಆರ್ಥಿಕ ಕಾರ್ಯಕ್ರಮಗಳು ಹೆಚ್ಚು ಆದ್ಯತೆ ಪಡೆದಿವೆ. ದಸರಾ ಮೆರವಣಿಗೆಯಲ್ಲಿ ಅಲಂಕೃತ ಆನೆ, ಒಂಟೆ, ಕುದುರೆ, ಪ್ರಾಚೀನ ಬಂಡಿಗಳು ಮತ್ತು ಅರಮನೆಗೆ ಸೇರಿದ ಇತರೆ ಧ್ವಜಗಳ ಪ್ರದರ್ಶನದೊಂದಿಗೆ ವಿವಿಧ ಜಿಲ್ಲೆಗಳ ಟ್ಯಾಬ್ಲೋಗಳು (ಮೌನ ಪ್ರದರ್ಶನ) ಸಾಂಸ್ಕೃತಿಕ ತಂಡಗಳು, ಸಂಗೀತ ನುಡಿಸುವ ಗುಂಪುಗಳು, ಪೋಲೀಸ್, ಎನ್.ಸಿ.ಸಿ. ಮತ್ತು ಅರಸೇನಾ ಪಡೆಯ ತುಕಡಿಗಳು ಇತ್ಯಾದಿಗಳ ಪಥ ಸಂಚಲನ ಮೈನವಿರೇಳಿಸುತ್ತದೆ.

ಅರಮನೆಯಿಂದ ಪ್ರಾರಂಭಗೊಂಡ ಮೆರವಣಿಗೆ ನಿಧಾನವಾಗಿ ಬನ್ನಿಮಂಟಪದಲ್ಲಿ ಮುಕ್ತಾಯಗೊಳ್ಳುತ್ತದೆ. ಮುಕ್ತಾಯ ಸಮಾರಂಭದಲ್ಲಿ ಪೋಲೀಸ್ ಬ್ಯಾಂಡ್‌ನವರಿಂದ ಸಂಗೀತ, ಅಶ್ವದಳದ ಕುದುರೆ ಸವಾರಿ ಸಂಭಂದವಾದ ಪ್ರದರ್ಶನಗಳಿರುತ್ತವೆ.

ಅಂಗಸಾಧಕರ ಕಸರತ್ತುಗಳ ನಂತರ, ರಾಜ್ಯ ಪೋಲೀಸ್ ಇಲಾಖೆಯಿಂದ ಅದ್ಭುತ ಟಾರ್ಚ್ ಲೈಟ್ ಪೆರೇಡ್, ಬಾಣ ಬಿರುಸುಗಳ ಪ್ರದರ್ಶನದಲ್ಲಿ ಅಂತ್ಯಗೊಳ್ಳುತ್ತದೆ.



## ದಸರಾ ಕ್ರೀಡೆ ಮತ್ತು ಮನರಂಜನೆ ಹಿಂದಿನ ಆಚರಣೆ

ಮೈಸೂರು ಪ್ರಜಾಪ್ರತಿನಿಧಿ ಸಭೆಯ "ದಸರಾ ಸೆಷನ್" (ದಸರಾ ಸಭೆ) ಅಲ್ಲದೇ ಕೃಷಿ ಮತ್ತು ಕೈಗಾರಿಕೆಗಳ ವಸ್ತು ಪ್ರದರ್ಶನ, ಫುಟ್‌ಬಾಲ್, ಟೆನ್ನಿಸ್ ಮತ್ತು ಪೋಲೋ ಕ್ರೀಡೆಗಳ ಟೂರ್ನ್‌ಮೆಂಟ್‌ಗಳು (ಕ್ರೀಡಾಸ್ಪರ್ಧೆ) ಸಾಕುಪ್ರಾಣಿಗಳ ಪ್ರದರ್ಶನಗಳು, ನಾಟಕಗಳು, ಸಿನಿಮಾ ಪ್ರದರ್ಶನ ಇತ್ಯಾದಿ ಬಹಳ ಜನರನ್ನು ಆಕರ್ಷಿಸುತ್ತಿತ್ತು. ದಸರಾ ಅಂಗವಾಗಿ ರಾಜಧಾನಿಯಲ್ಲಿ ಒಂದು ವಾರದ ಮಟ್ಟಿಗೆ ದಿವಾನರು, ಪ್ರಜಾಪ್ರತಿನಿಧಿ ಸಭೆಯ ಸದಸ್ಯರು, ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲೆಯ ಅಧಿಕಾರಿಗಳು ತಂಗಬೇಕಾಗಿತ್ತು. ದಸರಾ ಹಬ್ಬದ ಆಚರಣೆಗಳ ಏಕಾತನತೆಯನ್ನು ಮುರಿಯಲು ನವರಾತ್ರಿಯ ಸಮಯದಲ್ಲಿ ರೇಸಕೋರ್ಸ್ ಮತ್ತು ಪೋಲೋ ಮೈದಾನದಲ್ಲಿ ಕೆಲ ದಿನಗಳ ನಂತರ ಜಾತ್ರೆ ಆಯೋಜಿಸಲಾಗುತ್ತಿತ್ತು. ಇದು ಸಾಮಾನ್ಯವಾಗಿ ಬೆಟ್ಟದ ಜಾತ್ರೆ ಅಥವಾ ಚಾಮುಂಡಿ ಬೆಟ್ಟದ ರಥೋತ್ಸವ ಸಮಯಕ್ಕೆ ಹೊಂದಿಕೊಳ್ಳುತ್ತಿತ್ತು.












ಮೈಸೂರು ಅರಸರು ಕುಸ್ತಿ ಕಲೆಯ ಮಹಾ ಪೋಷಕರಾಗಿದ್ದರು. ಅವರ ಆಡಳಿತ ಅವಧಿಯಲ್ಲಿ ಕುಸ್ತಿ ಪಟುಗಳಾದ ಜಟ್ಟಿಗಳಿಗೆ ವಿಶೇಷ ಪ್ರೋತ್ಸಾಹ ನೀಡಲಾಯಿತು. ಇವರು "ವಜ್ರಮುಷ್ಠಿ" ಎಂಬ ಆಯುಧವನ್ನು ಕೈಗೆ ಧರಿಸಿ ಎದುರಾಳಿಯ ಮೇಲೆ ದಾಳಿ ಮಾಡುತ್ತಿದ್ದರು.

"ಮೈಸೂರು ಪ್ರಾಣಿ ಪ್ರದರ್ಶನ" ಕೂಡಾ ರೇಸ್‌ಕೋರ್ಸ್‌ನಲ್ಲಿ ದಸರಾ ಅಂಗವಾಗಿ ಏರ್ಪಡಿಸಲಾಗುತ್ತಿತ್ತು. ಮಹಾರಾಜ ಮತ್ತು ಯುವರಾಜರ ವಿಶೇಷ ಆಸಕ್ತಿಯ ಕಾರಣ ಈ ಕೆಳಗಿನ ವಿಶೇಷ ಪ್ರದರ್ಶನಗಳನ್ನು ಮತ್ತು ಸ್ಪರ್ಧೆ ಏರ್ಪಡಿಸಲಾಗಿತ್ತು. "ಉತ್ತಮ ಎತ್ತಿನ ಗಾಡಿಗಳ ಪ್ರದರ್ಶನ" ಒಂಟಿ ಕುದುರೆ ಗಾಡಿ, ಬಂಡಿ, ಸಣ್ಣ ಕುದುರೆ ಗಾಡಿ, ಕುದುರೆಗಳ ನೆಗೆತದ ಸ್ಪರ್ಧೆ, ಪಂಜರದ ಅನೇಕ ಪಕ್ಷಿಗಳು ಇತ್ಯಾದಿ ಪ್ರಾಣಿಗಳ ಪ್ರದರ್ಶನದಲ್ಲಿ ಒಂದು ತಮಾಷೆಯ ಸ್ಪರ್ಧೆ ಇತ್ತು. ಅದು "ತನ್ನ ಮಾಲಿಕನನ್ನು ಹಿಂಬಾಲಿಸುವ ಪ್ರಾಣಿ" ಎಂದಿದ್ದು ಅದರಲ್ಲಿ ಹಸು, ಎತ್ತು, ಗೂಳಿ, ಕುರಿ, ಮೇಕೆ ಮತ್ತು ಬೆಕ್ಕುಗಳು ಭಾಗವಹಿಸಬಹುದಾಗಿತ್ತು ಆದರೆ ಮನುಷ್ಯನ ಉತ್ತಮ ಸಂಗಾತಿಯಾದ ನಾಯಿಯನ್ನು ಸ್ಪರ್ಧೆಯಿಂದ ಹೊರಗಿಡಲಾಗಿತ್ತು.

## ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳು ಇಂದು

ಮೈಸೂರು ಒಡೆಯರುಗಳ ಆಳ್ವಿಕೆಯು ಮುಗಿದ ನಂತರ ವಾರ್ಷಿಕ ದಸರಾ ಆಚರಣೆಯು ಹೊಸ ಸ್ವರೂಪವನ್ನು ಪಡೆಯಿತು. ಈಗ ದರ್ಬಾರ್ ಸಭಾಂಗಣದ ಮುಂಭಾಗದಲ್ಲಿ ಕರ್ನಾಟಕದ ವಿವಿದೆಡೆಗಳಿಂದ ಬಂದ ಸಾಂಸ್ಕೃತಿಕ ತಂಡಗಳ ನೃತ್ಯ, ಗಾಯನ ಮತ್ತು ಅನೇಕ ರೀತಿಯ ಪ್ರದರ್ಶನಗಳನ್ನು ಸಂಜೆ ಏರ್ಪಡಿಸಲಾಗುತ್ತಿದೆ. ರಾಜ್ಯ ಪೋಲಿಸ್ ಬ್ಯಾಂಡ್, ಕರ್ನಾಟಕ ಮ್ಯೂಸಿಕ್ ಬ್ಯಾಂಡ್ ಮತ್ತು ಪಾಶ್ಚಿಮಾತ್ಯ ಮ್ಯೂಸಿಕ್ ಬ್ಯಾಂಡ್‌ಗಳು ಕೂಡಾ ಅರಮನೆ ಮುಂಭಾಗದಲ್ಲಿ ಸಂಗೀತ ನುಡಿಸುತ್ತಾರೆ. ದರ್ಬಾರ್ ಹಾಲ್ (ಸಭಾಂಗಣ) ಒಳಗಡೆ ಸುಪ್ರಸಿದ್ಧ ಸಂಗೀತಗಾರರು ದೇಶದ ನಾನಾ ಭಾಗಗಳಿಂದ ಬಂದು ತಮ್ಮ ಕರ್ನಾಟಕ ಅಥವಾ ಹಿಂದೂಸ್ಥಾನಿ ಸಂಗೀತ ಕಛೇರಿಯನ್ನು ನಡೆಸಿಕೊಡುತ್ತಾರೆ. ಇದು ಧ್ವನಿ ಅಥವಾ ವಾದ್ಯದ ಮೂಲಕವೂ ಆಗಿರಬಹುದು. ಇದಲ್ಲದೇ ಮೈಸೂರಿನ ವಿವಿಧ ಭಾಗಗಳಲ್ಲಿ ನಾಟಕ, ಕವಿಗೋಷ್ಠಿ, ನೃತ್ಯ, ಜಾನಪದ, ಚಿತ್ರ ಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳನ್ನು ದಸರಾ ಅಂಗವಾಗಿ ಹಮ್ಮಿಕೊಳ್ಳಲಾಗುತ್ತದೆ. ಈ ಸಂದರ್ಭದಲ್ಲಿ "ಪಾರಂಪರಿಕ ನಡಿಗೆಯನ್ನು" ಕೂಡಾ ಆಯೋಜಿಸಲಾಗುತ್ತದೆ.








## ದುರ್ಗಾಪೂಜೆ

ದಸರಾ ಹಬ್ಬವೆಂದರೆ ಶಕ್ತಿಮಾತೆಯ ವಿಶೇಷ ಆರಾಧನೆ. ದೇವಿಯು ಯುದ್ಧದಲ್ಲಿ ಅಜೇಯಳು, ಕೈಗಾರಿಕೋದ್ಯಮಿಗಳ, ಕಾರ್ಮಿಕರ ಮತ್ತು ಜನಮಾನಸದಲ್ಲಿ ನೆಲೆಸಿದ್ದಾಳೆ. ದಸರಾ ಆಚರಣೆಯು ದುರ್ಗೆ ಅಥವಾ ಶಕ್ತಿಯ ಆರಾಧನೆಯಾಗಿದೆ. ಈ ಆರಾಧನೆಯ ಪರಂಪರೆಯು ರಾಮಾಯಣದ ಕಾಲದಲ್ಲಿ "ಆಯುಧಪೂಜೆ" ಎಂದು ಹೆಸರಾಗಿತ್ತು. ಅರಮನೆಯ ಕಲ್ಯಾಣ ಮಂಟಪದ ದಕ್ಷಿಣ ಗೋಡೆಯ ಮೇಲಿರುವ ವರ್ಣಚಿತ್ರದಲ್ಲಿ ರಾಕ್ಷಸ ರಾವಣನೊಂದಿಗಿನ ಲಂಕಾ ಯುದ್ಧಕ್ಕೆ ಮುನ್ನ ರಾಮನು ದುರ್ಗಾಮಾತೆಯನ್ನು ಮತ್ತು ಆಯುಧಗಳನ್ನು ಪೂಜಿಸುತ್ತಿರುವುದನ್ನು ಕಾಣಬಹುದು. ಮುನಿಗಳು, ವಾನರರು ಮತ್ತಿತರ ರಾಮನ ಬೆಂಬಲಿಗರು ರಾಮನ ಸುತ್ತ ನೆರೆದಿರುವಂತೆ ಚಿತ್ರಿಸಲಾಗಿದೆ.



# ಪಾರಂಪರಿಕ ಅರಮನೆಗಳು/ಸೌಧಗಳು

## ಜಗನ್ಮೋಹನ ಅರಮನೆ / ಆರ್ಟ್ ಗ್ಯಾಲರಿ

ಇದು ಮೈಸೂರಿನ ಅತ್ಯಾಕರ್ಷವಾದ ಕಟ್ಟಡಗಳಲ್ಲೊಂದು. ಯುರೋಪಿಯನ್ ಅಧಿಕಾರಿಗಳ ಔತಣಕ್ಕೆಂದು ಮುಮ್ಮಡಿ ಕೃಷ್ಣರಾಜ ಒಡೆಯರ್ 1861ರಲ್ಲಿ ಜಗನ್ಮೋಹನ ಆರಮನೆ ನಿರ್ಮಿಸಿದರು. ಇದು ಅರಮನೆ ಕೋಟೆಯ ಪಶ್ಚಿಮ ಭಾಗದಲ್ಲಿನ ಬ್ರಹ್ಮಪುರಿ ಮಹಾದ್ವಾರದ ಎದುರಿಗೆ ಇದೆ. ಈ ಕಟ್ಟಡದ ಮೊದಲ ಮಹಡಿಯನ್ನು ಚಿತ್ರಗಳಿಂದ ಅಲಂಕರಿಸಲಾಗಿದ್ದು ಅಷ್ಟು ಹೊಂದಿಕೆಯಾದಂತೆ ತೋರುವುದಿಲ್ಲ. ಈ ಕಟ್ಟಡದ ಮುಂಭಾಗಕ್ಕೆ ಅಲಂಕೃತ ತೆರೆದ ಅಂಕಣದ ಭಾಗವನ್ನು 1900ರಲ್ಲಿ ಸೇರಿಸಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವಿವಾಹ ಮಹೋತ್ಸವ (1900) ಮತ್ತು ಪಟ್ಟಾಭಿಷೇಕ ಉತ್ಸವ (1902) ಇಲ್ಲಿ ನೆರವೇರಿತು.

ಈ ಕಟ್ಟಡದಲ್ಲಿ ಈಗ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲಾಗಿದೆ. ಈ ವಸ್ತುಸಂಗ್ರಹಾಲಯದಲ್ಲಿ ವರ್ಣಚಿತ್ರಗಳು, ಶಿಲ್ಪಗಳು ಮತ್ತು ಸಂಗೀತವಾದ್ಯ ಪರಿಕರಗಳನ್ನು ಪ್ರದರ್ಶಿಸಲಾಗಿದೆ. ಇದಲ್ಲದೆ ಪಿಂಗಾಣಿ ಸಾಮಾನುಗಳು, ಕಲ್ಲು, ದಂತ ಮತ್ತು ಗಂಧದ ಮರದಿಂದ ಮಾಡಿದ ಕೆತ್ತನೆಯು ಪ್ರದರ್ಶಿತಗೊಂಡಿವೆ.

ಆರ್ಟ್‌ಗ್ಯಾಲರಿ ಸಂಗ್ರಹದಲ್ಲಿ ಅದ್ವಿತೀಯ ಮೌಲ್ಯದ ಟ್ರಾವೆಂಕೂರಿನ ರಾಜಾ ರವಿವರ್ಮನ ಸಾಂಪ್ರದಾಯಿಕ ಚೆನ್ನದ ಲೇಪವುಳ್ಳ ವರ್ಣಚಿತ್ರಗಳಿವೆ ಮತ್ತು ರಷ್ಯಾದ ಚಿತ್ರಕಾರ ಸ್ವೆಟ್ಸಲೋವ್ ರೋರಿಕ್‌ರ ಕಲಾಕೃತಿಗಳೂ ಇವೆ.



## ಲಲಿತ ಮಹಲ್

ಮೈಸೂರು ನಗರದ ಪೂರ್ವಕ್ಕೆ ಎತ್ತರವಾದ ದಿಣ್ಣೆಯ ಮೇಲೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅಪಾರ ವೈಭವದ ಅತಿಥಿ ಗೃಹವನ್ನು 1931ರಲ್ಲಿ ಕಟ್ಟಿಸಿದರು. ಎರಡು ಅಂತಸ್ತುಗಳಿರುವ ಕಟ್ಟಡದ ಮುಂಭಾಗದಲ್ಲಿ ಎರಡೆರಡು ಐಯಾನಿಕ್ (ಜೋಡಿ) ಕಂಭಗಳಿವೆ. ಮಧ್ಯ ಭಾಗದಲ್ಲಿ ಮುಂಚಾಚಿದ ಪ್ರವೇಶ ಮಂಟಪ ದ್ವಾರವಿದೆ. ಮೂಲೆಗಳಲ್ಲಿ ವೃತ್ತಾಕಾರದ ಗುಮ್ಮಟಗಳಿವೆ. ಮಧ್ಯದ ವೃತ್ತಾಕಾರದ ಸಭಾಂಗಣದ ಮೇಲ್ಭಾಗದಲ್ಲಿ ವೃತ್ತಾಕಾರದ ಎತ್ತರವಾದ ಗುಮ್ಮಟವಿದೆ. ಇದರ ಗೋಡೆಗಳಲ್ಲಿ ಚಿತ್ತಾರದ ಅಲಂಕಾರವುಳ್ಳ ಗಾಜಿನ ಬೆಳಕಿನ ಕಿಂಡಿಗಳಿವೆ. ಇದನ್ನು ಇಂದು ಪಾರಂಪರಿಕ ಹೋಟೆಲ್ ಆಗಿ ಬಳಸಲಾಗುತ್ತಿದೆ.

ಲಂಡನ್‌ನ ಸಂತ ಪೌಲ್ಸ ಕೆಥೆಡ್ರಲ್‌ನ್ನು ಮಾದರಿಯಾಗಿಟ್ಟುಕೊಂಡು ಮಧ್ಯದ ಗುಮ್ಮಟವನ್ನು ರಚಿಸಲಾಗಿದೆ. ಕಟ್ಟಡದ ಒಳಗಡೆ ಬಳಸಿರುವ ದೀಪ ಗುಚ್ಛಗಳು ಮತ್ತು ಕಿಟಕಿ ಬಾಗಿಲುಗಳ ಸಾಮಗ್ರಿಗಳನ್ನು ವಿದೇಶದಿಂದ ಆಮದು ಮಾಡಿಕೊಳ್ಳಲಾಗಿದ್ದು ಕುಶಲ ಕಲೆಯಿಂದ ಕೂಡಿವೆ.





## ರಾಜೇಂದ್ರ ವಿಲಾಸ್ ಅರಮನೆ



ಚಾಮುಂಡಿಬೆಟ್ಟದ ಮೇಲ್ತುದಿಯ ಅಂಚಿನಲ್ಲಿ ರಾಜೇಂದ್ರವಿಲಾಸ್ ಅರಮನೆ ಇದೆ. ಇಲ್ಲಿಂದ ಮೈಸೂರು ನಗರದ ವಿಹಂಗಮ ನೋಟ ಲಭ್ಯ. ಅರಮನೆಯ ನಾಲ್ಕು ಮೂಲೆಗಳಲ್ಲಿ ಮತ್ತು ಮಧ್ಯದಲ್ಲಿನ ಗುಮ್ಮಟಗಳು ದೂರದಿಂದ ಆಕಾಶದಲ್ಲಿ ವಿಶೇಷ ಛಾಯಾರೂಪ ಒದಗಿಸಲೋ ಎಂಬಂತೆ ನಿರ್ಮಿಸಿದವುಗಳಾಗಿ ತೋರುತ್ತದೆ. ಈ ಗುಮ್ಮಟಗಳ ಕೆಳಗೆ ಇರುವ ಬೆಜ್ಜಾಗಳು ರಾಜಸ್ಥಾನಿ ಛತ್ರಿಗಳ ಮಾದರಿಯಲ್ಲಿವೆ.

ಕಟ್ಟಡದ ಉಳಿದ ಭಾಗಗಳು ಭಾರತೀಯ–ಪರ್ಶಿಯನ್ ಶೈಲಿಯಲ್ಲಿವೆ. ಕಮಾನುಗಳು (cusped archs) ಸಣ್ಣ ಕಂಭದ ಮೇಲೆ ನಿಂತಿವೆ. ಈ ಅರಮನೆ ಹಿಂದೆ (1822) ಇದ್ದ ಕಟ್ಟಡದ ಪುನರ್ ನಿರ್ಮಾಣವಾಗಿದ್ದು 1938ರಲ್ಲಿ ಪೂರ್ಣಗೊಂಡಿತು.

## ಲೋಕರಂಜನ್ ಮಹಲ್

ಮುಮ್ಮಡಿ ಕೃಷ್ಣರಾಜ ಒಡೆಯರ್ 1842ರಲ್ಲಿ ಬೇಸಿಗೆ ಅರಮನೆ ಎಂದು ಕರೆಯಲಾಗುವ ಈ ಲೋಕರಂಜನ್ ಮಹಲ್ ನಿರ್ಮಿಸಿದರು. ದಸರಾ ಸಂದರ್ಭದಲ್ಲಿ ಬಂದ ಐರೋಪ್ಯ ಮತ್ತು ಭಾರತೀಯ ಅತಿಥಿಗಳಿಗೆ ಈ ಮಹಲ್‌ನಲ್ಲಿ ಔತಣಕೂಟವನ್ನು ಏರ್ಪಡಿಸಲಾಗುತ್ತಿತ್ತು. ಹುಟ್ಟುಹಬ್ಬದ ಆಚರಣೆ ಮತ್ತು ಇತರ ಸಮಾರಂಭಗಳಿಗೂ ಇದು ಬಳಕೆಯಾಗುತ್ತಿತ್ತು. ನಂತರದ ದಿನಗಳಲ್ಲಿ ಇದು ಅರಮನೆಯ ಶಾಲೆಯಾಗಿ ಪರಿವರ್ತನೆಗೊಂಡಿತು.





## ಕಾರಂಜಿ ಸೌಧ

ಹತ್ತನೆಯ ಚಾಮರಾಜೇಂದ್ರ ಒಡೆಯರ್ ಅವರ ಮಗಳಾದ ಕೃಷ್ಣರಾಜಮ್ಮಣ್ಣಿಯವರ ನಿವಾಸಕ್ಕೆಂದು ಕಾರಂಜಿ ಕೆರೆಯ ಪಕ್ಕದಲ್ಲಿ ನಿರ್ಮಿಸಲಾದ ಕಟ್ಟಡಕ್ಕೆ ಕಾರಂಜಿ ಸೌಧವೆಂದು ಹೆಸರಿಸಲಾಗಿದೆ. ಅರಮನೆ ಕೋಟೆಯ ಉತ್ತರಭಾಗದ ನಜ಼ರ್‌ಬಾದ ಮೊಹಲ್ಲಾದಲ್ಲಿ ಕಾರಂಜಿ ಸೌಧವನ್ನು 1914ರಲ್ಲಿ ನಿರ್ಮಿಸಲಾಯಿತು. ಇದನ್ನು ಭಾರತೀಯ–ಪರ್ಶಿಯನ್ ಮತ್ತು ಐರೋಪ್ಯ ಶೈಲಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಅಂಚೆ ತರಬೇತಿ ಕೇಂದ್ರ ಮತ್ತು ದೇಶದ ಅಂಚೆ ಇತಿಹಾಸವನ್ನು ತಿಳಿಸುವ ವಸ್ತು ಸಂಗ್ರಹಾಲಯ ಈ ಕಟ್ಟಡದಲ್ಲಿದೆ.



## ಜಯಲಕ್ಷ್ಮಿ ವಿಲಾಸ ಸೌಧ

ನಗರದಿಂದ ಪಶ್ಚಿಮಕ್ಕೆ ಸುಮಾರು ಮೂರು ಕಿ.ಮೀ. ದೂರದಲ್ಲಿ ಎತ್ತರವಾದ ಪ್ರದೇಶದ ಮೇಲೆ ಹತ್ತನೆಯ ಚಾಮರಾಜ ಒಡೆಯರ್ ಅವರ ಮೊದಲ ಮಗಳು ಮತ್ತು ನಾಲ್ಮಡಿ ಕೃಷ್ಣರಾಜ ಒಡೆಯರ್ ಅವರ ಅಕ್ಕ ಜಯಲಕ್ಷ್ಮಿಯವರ ನಿವಾಸಕ್ಕೆಂದು 1907ರಲ್ಲಿ ಈ ಸೌಧ ನಿರ್ಮಿಸಲಾಯಿತು.

ಈ ಸೌಧ ಒಂದೇ ಕಟ್ಟಡದಂತೆ ತೋರಿದರೂ ವಾಸ್ತವವಾಗಿ ಮೂರು ಕಟ್ಟಡಗಳಾಗಿದ್ದು ಒಂದಕ್ಕೊಂದು ಸೇರಿಕೊಂಡು ಒಂದೇ ಕಟ್ಟಡವೆಂಬ ನೋಟವನ್ನು ಒದಗಿಸುತ್ತದೆ.

ಸೌಧದ ಪೂರ್ವ ಮತ್ತು ಪಶ್ಚಿಮ ಭಾಗವು ಸುಮರು 122ಮೀ ಉದ್ದವಿದ್ದು ಅಲಂಕೃತ ಕೈಪಿಡಿ ಇದೆ. ಪೂರ್ವ ಮತ್ತು ಪಶ್ಚಿಮ ಪ್ರವೇಶ ದ್ವಾರಗಳ ಮುಂಭಾಗ ತ್ರಿಕೋನಾಕಾರಾದ ಮಾಡು ಹೊಂದಿದೆ. ಉತ್ತರದ ಕೈಪಿಡಿಯ ಮೇಲ್ಗಡೆ ಗಜಲಕ್ಷ್ಮಿಯ ಸುಂದರ ಉಬ್ಬು ಶಿಲ್ಪವಿದೆ. ಸೌಧದ ಮುಂಭಾಗದಲ್ಲಿ ಐಯಾನಿಕ್ ಮತ್ತು ಕೊರಿಂಥಿಯನ್ ಜೋಡಿ ಕಂಭಗಳಿಂದ ಮತ್ತು ಸಂಬಂಧಿಸಿದ ಅಲಂಕಾರಗಳಿಂದ ಹಾಗೂ ಡೋರಿಕ್ ಮಾದರಿಯ ಕಮಾನುಗಳು



ಮುಖ್ಯ ಕಟ್ಟಡದೊಂದಿಗೆ ಅಕ್ಕಪಕ್ಕದ ಕಟ್ಟಡಗಳನ್ನು ಜೋಡಿಸುತ್ತದೆ. ಭೋಜನ ಶಾಲೆಯು ಸಂಪೂರ್ಣ ಹಿಂದೂ ಮಾದರಿಯ ಅಲಂಕರಣವನ್ನು ಹೊಂದಿದೆ.

ಕಟ್ಟಡದ ಕಿಟಕಿ ಬಾಗಿಲುಗಳು, ಕಪಾಟುಗಳು ಮತ್ತು ಕಂಭಗಳು ಉತ್ತಮ ಯಥೇಚ್ಛ ಕೆತ್ತನೆಯಿಂದ ಕೂಡಿದೆ. ಮೈಸೂರು ವಿಶ್ವವಿದ್ಯಾಲಯದ ಜಾನಪದ ವಸ್ತುಸಂಗ್ರಹಾಲಯ ಮತ್ತು ಇತರ ಕಛೇರಿಗಳು ಇಲ್ಲಿ ಕಾರ್ಯ ನಿರ್ವಹಿಸುತ್ತಿವೆ.



## ಚೆಲುವಾಂಬ ವಿಲಾಸ ಸೌಧ

ಹತ್ತನೆಯ ಚಾಮರಾಜೇಂದ್ರ ಒಡೆಯರ್ ಅವರ ಮೂರನೆಯ ಪುತ್ರಿಯ ನಿವಾಸವನ್ನು ಚೆಲುವಾಂಬಾ ವಿಲಾಸ ಸೌಧವೆಂದು ಕರೆಯುತ್ತಾರೆ. ಅರಮನೆ ಕೋಟೆಯ ವಾಯುವ್ಯ ದಿಕ್ಕಿನಲ್ಲಿ ಪಡುವಾರಹಳ್ಳಿಯಲ್ಲಿರುವ ಈ ಸೌಧವು ವಿಶ್ವ ವಿಖ್ಯಾತ ಕೃಷ್ಣರಾಜ ಸಾಗರ ಮತ್ತು ಬೃಂದಾವನ ಗಾರ್ಡನ್‌ಗೆ ಹೋಗುವ ಮಾರ್ಗದಲ್ಲಿದೆ. ಭಾರತೀಯ–ಪರ್ಶಿಯನ್ ವಾಸ್ತು ಶೈಲಿಯಲ್ಲಿರುವ ಭವ್ಯವಾದ ನೋಟವುಳ್ಳ ಕಟ್ಟಡವು ವಿಶಾಲ ಪ್ರದೇಶದಲ್ಲಿದೆ. ಕೇಂದ್ರೀಯ ಆಹಾರ ಸಂಶೋಧನಾ ಸಂಸ್ಥೆ ಈ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.



# ಪಾರಂಪರಿಕ ವಸ್ತು ಸಂಗ್ರಹಾಲಯಗಳು

## ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯ / ವೆಲ್ಲಿಂಗ್‌ಟನ್ ಲಾಡ್ಜ್

ಸರ್ಕಾರಿ ಅತಿಥಿ ಗೃಹದ ಪಶ್ಚಿಮ ದ್ವಾರದ ಬಳಿ ಮತ್ತು ಇಂದಿನ ಸರ್ಕಾರಿ ಬಸ್‌ನಿಲ್ದಾಣದ ಎಡಗಡೆ ವೆಲ್ಲಿಂಗ್‌ಟನ್ ಲಾಡ್ಜ್ ಹೆಸರಿನ ಕಟ್ಟಡವಿದೆ. ಕರ್ನಲ್ ಆರ್ಥರ್ ವೆಲ್ಲೆಸ್ಲಿ (ನಂತರ ಡ್ಯೂಕ್ ಆಫ್ ವೆಲ್ಲಿಂಗಟನ್) ಅವರಿಗಾಗಿ ನಿರ್ಮಿಸಿದ ಕಟ್ಟಡವಾಗಿದ್ದು, ಮೈಸೂರಿನ ರಾಜಕೀಯ ಅಧಿಕಾರಿಯಾಗಿದ್ದಾಗ (1799–1801) ಅವರ ನಿವಾಸವಾಗಿತ್ತು. ನವೀಕೃತ ಕಟ್ಟಡದಲ್ಲಿ ಇಂದು ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯದ ಹಾಗೂ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯ ಕಲಾಗ್ಯಾಲರಿ ಈ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ.



## ರೈಲು ವಸ್ತು ಸಂಗ್ರಹಾಲಯ

ಮೈಸೂರು ರೈಲು ನಿಲ್ದಾಣಕ್ಕೆ ಹೊಂದಿಕೊಂಡಂತೆ ಕೆ.ಆರ್. ಎಸ್ ರಸ್ತೆಯಲ್ಲಿ ಇರುವ ರೈಲು ವಸ್ತುಸಂಗ್ರಹಾಲಯದಲ್ಲಿ ಐತಿಹಾಸಿಕ ರೈಲು ಪರಂಪರೆಯನ್ನು ನೆನಪಿಸುವ, 1899ರಲ್ಲಿ ಬ್ರಿಟನ್‌ನಲ್ಲಿ ಮಹಾರಾಣಿಯವರಿಗೆಂದೇ ವಿಶೇಷವಾಗಿ ತಯಾರಿಸಲಾದ ರೈಲು ಕೋಚ್ (ರೈಲುಗಾಡಿ) ಮತ್ತು 1914ರಲ್ಲಿ ಮೈಸೂರಿನ ರೈಲ್ವೆ ಕಾರ್ಯಾಗಾರದಲ್ಲಿ ತಯಾರಾದ ಊಟದ ಹಾಲ್ ಇರುವ ಕೋಚ್ ಮತ್ತು ಕೆಲವು ಹಳೆಯ ಕೋಚ್‌ಗಳಿವೆ. ಇವಲ್ಲದೇ "ಮೈಸೂರು ರೈಲ್ವೆ ಇತಿಹಾಸಕ್ಕೆ" ಸಂಬಂಧಿಸಿದ ಚಿತ್ರಗಳು ಮತ್ತು ಫೋಟೋಗಳು ಪ್ರದರ್ಶಿತವಾಗಿವೆ.





## ಜಾನಪದ ವಸ್ತುಸಂಗ್ರಹಾಲಯ

ಮೈಸೂರು ವಿಶ್ವವಿದ್ಯಾಲಯದ ಮಾನಸ ಗಂಗೋತ್ರಿ ಆವರಣದಲ್ಲಿನ ಜಯಲಕ್ಷ್ಮಿ ವಿಲಾಸ ಸೌಧದಲ್ಲಿ ಬಹಳ ಜನ ಮೆಚ್ಚಿರುವ ಜಾನಪದ ವಸ್ತು ಸಂಗ್ರಹಾಲಯವಿದೆ. ನಿತ್ಯ ಬಳಕೆಯ ವಸ್ತುಗಳಾದ ಪಾತ್ರೆ, ಪಡಗ, ವಸ್ತ್ರಗಳು, ಕರಕುಶಲ ಕಲೆ, ಮರದ ರಥಗಳು, ಗ್ರಾಮೀಣ ಬದುಕು ಮತ್ತು ಸಂಸ್ಕೃತಿಯನ್ನು ಬಿಂಬಿಸುವ ವಸ್ತುಗಳು ಇತ್ಯಾದಿ, 6500ಕ್ಕೂ ಹೆಚ್ಚಿನ ವಸ್ತುಗಳ ಸಂಗ್ರಹವಿದೆ.

ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಪುರಾತತ್ವಕ್ಕೆ ಸಂಭಂದಿಸಿದ ವಸ್ತು ಸಂಗ್ರಹಾಲಯ ಇದೇ ಆವರಣದಲ್ಲಿದೆ.

ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದಲ್ಲಿ ಕೂಡಾ ಕೆಲವು ಪ್ರಾಚ್ಯವಸ್ತುಗಳ ಹಾಗೂ ಶಿಲ್ಪಗಳ ಸಂಗ್ರಹವಿದೆ.



## ಪ್ರಾದೇಶಿಕ ಪ್ರಾಕೃತಿಕ ವಿಜ್ಞಾನ ವಸ್ತುಸಂಗ್ರಹಾಲಯ

ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದ ಕೆಳಗೆ  ನೈಸರ್ಗಿಕ ಇತಿಹಾಸ ಕುರಿತಾದ ರಾಷ್ಟ್ರೀಯ ವಸ್ತುಸಂಗ್ರಹಾಲಯ (1978) ನವದೆಹಲಿ, ಕಾರ್ಯ ನಿರ್ವಹಿಸುತ್ತಿದೆ. ಇವರು ಮೂರು ಪ್ರಾದೇಶಿಕ ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸಿರುತ್ತಾರೆ. ಮೈಸೂರಿನ ಪ್ರಾದೇಶಿಕ ಕೇಂದ್ರವು (RMNH) 1995ರಲ್ಲಿ ಪ್ರಾರಂಭವಾಗಿದೆ. ಪರಿಸರಕ್ಕೆ ಸಂಭಂದಿಸಿದಂತೆ ವಿವಿಧ ಆಯಾಮಗಳಲ್ಲಿ ಪರಿಸರಕ್ಕೆ ಅನ್ವಯಿಸುವ ಅಸಂಪ್ರದಾಯಿಕ ವಿದ್ಯೆಯನ್ನು ನೀಡುವುದಲ್ಲದೆ, ಸಂಗ್ರಹಾಲಯವು ತಾತ್ಕಾಲಿಕ ಪ್ರದರ್ಶನಗಳನ್ನು ಜ್ಞಾನ ಸಂಬಂಧಿ ಕಾರ್ಯಕ್ರಮಗಳನ್ನು ಶಾಲಾ ಮಕ್ಕಳಿಗೆ, ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಜನಸಾಮಾನ್ಯರಿಗೂ ಏರ್ಪಡಿಸುತ್ತದೆ. ಈ ವಸ್ತುಸಂಗ್ರಹಾಲಯ ತಾತ್ಕಾಲಿಕ ಪ್ರದರ್ಶನ ಆವರಣ, ಆವಿಷ್ಕಾರ ಕೇಂದ್ರ ಮತ್ತು ಅಂಗವಿಕಲರಿಗೆ ಉದ್ಯಾನವನ ಹೊಂದಿದೆ.

ಈ ಪ್ರಾಂತೀಯ ವಸ್ತುಸಂಗ್ರಹಾಲಯವು ಮೂಲ ವಸ್ತುಗಳ ಮತ್ತು ಪ್ರತಿಕೃತಿಗಳ (Model's) ಹದವಾದ ಮಿಶ್ರಣವನ್ನು ಹೊಂದಿದೆ. ಪ್ರಸ್ತುತ ಜೀವ ವೈವಿಧ್ಯತೆ ಮತ್ತು ಕಾಲಾನುಕ್ರಮಣಿಯಲ್ಲಿ ಜೀವ ವಿಕಾಸ ಬಿಂಬಿಸುವ ಎರಡು ಗ್ಯಾಲರಿಗಳಿವೆ. ಅರಮನೆಗಳ ನಗರ ಮೈಸೂರಿನಲ್ಲಿ ಇದೊಂದು ವಿಶಿಷ್ಟ ಹೆಗ್ಗುರುತು. ನೈಸರ್ಗಿಕ ಪ್ರಪಂಚ, ಜೀವ ವಿಕಾಸದ ವಿವಿಧ ಹಂತಗಳು ಸಸ್ಯ ಮತ್ತು ಪ್ರಾಣಿಸಂಕುಲದ ವೈವಿಧ್ಯತೆಯನ್ನು ಅರಿಯಲು ಮತ್ತು ಅನ್ವೇಷಿಸಲು ವಸ್ತುಸಂಗ್ರಹಾಲಯ ಅನುವು ಮಾಡಿಕೊಡುತ್ತದೆ.






## ಜಗನ್ಮೋಹನ ಅರಮನೆ / ಆರ್ಟ್ ಗ್ಯಾಲರಿ

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು 1915ರಲ್ಲಿ ಜಗನ್ಮೋಹನ ಅರಮನೆಯಲ್ಲಿ ಕಲಾ ಗ್ಯಾಲರಿ ಸ್ಥಾಪಿಸಿದರು. ಸದೇಗ್ ಝಡ್ ಶಾಹ್‌ರಿಂದ 1924ರಲ್ಲಿ ಇಂಡಿಯನ್ ಗ್ಯಾಲರಿ ಪ್ರಾರಂಭವಾಯಿತು. 1937ರಲ್ಲಿ ಜಗನ್ಮೋಹನ ಅರಮನೆಯ ವಿಶಾಲ ಕೊಠಡಿಗಳಿಗೆ ಇಂಡಿಯನ್ ಗ್ಯಾಲರಿಯ ಸಂಗ್ರಹಗಳನ್ನು ಸ್ಥಳಾಂತರಿಸಿ, ಮರು ಪ್ರದರ್ಶನವನ್ನು ಡಾ॥ ಕಸಿನ್ಸ್ ನೇತೃತ್ವದಲ್ಲಿ ಏರ್ಪಡಿಸಲಾಯಿತು. ರಾಜಾ ರವಿವರ್ಮ ಅವರ ವರ್ಣ ಚಿತ್ರಗಳ ಸಂಗ್ರಹ ಈ ಗ್ಯಾಲರಿಯಲ್ಲಿದೆ.



# ಪಾರಂಪರಿಕ ಕಟ್ಟಡಗಳು

## ಸರ್ಕಾರಿ ಅತಿಥಿ ಗೃಹ (ಗೌರ್ನಮೆಂಟ್ ಹೌಸ್)

ಮೇಜರ್ ಡಿ. ಹ್ಯಾವಿಲ್ಯಾಂಡ್ ಎಂಬ ಫ್ರೆಂಚ್ ಇಂಜಿನಿಯರ್ ಈ ಅತಿಥಿ ಗೃಹವನ್ನು 1805ರಲ್ಲಿ ವಿನ್ಯಾಸಗೊಳಿಸಿ ನಿರ್ಮಿಸಿದನು. ಕಟ್ಟಡದ ಮುಂಭಾಗವು ಡೊರಿಕ್ ವಾಸ್ತುಶಿಲ್ಪವನ್ನು ಅನುಸರಿಸಿದೆ. ಇದರಲ್ಲಿರುವ ಹಾಲ್ ದಕ್ಷಿಣ ಭಾರತದಲ್ಲಿ ಕಂಭಗಳಿಲ್ಲದೇ ನಿರ್ಮಿಸಿದ ಉದ್ದನೆಯ ನಿರ್ಮಿತಿಯೆಂದು ಪ್ರಸಿದ್ಧಿಯಾಗಿತ್ತು. ಇದರಲ್ಲಿ ಸರ್ ಜಾನ್ ಮಾಲ್ಕಂ ಮತ್ತು ಮೇಜರ್ ವಿಲ್ಕ್ಸ್ ವಾಸವಿದ್ದರು. ಬ್ರಿಟೀಶರ ಆಳ್ವಿಕೆಯ ಸಮಯದಲ್ಲಿ ಈ ಅತಿಥಿ ಗೃಹ ಅನೇಕ ವೈಸರಾಯರಿಗೆ ಮತ್ತು ಸರ್ಕಾರದ ಉನ್ನತ ಅಧಿಕಾರಿಗಳಿಗೆ ಆತಿಥ್ಯ ನೀಡಿದೆ. ಅಂತಹ ಅಧಿಕಾರಿಗಳಿಗೆ ಸರ್ಕಾರದ ಔತಣ ಏರ್ಪಡಿಸುವುದು ಅಂದಿನ ಸಂಪ್ರದಾಯವಾಗಿತ್ತು. ಇಂದಿಗೂ ಕೂಡಾ ರಾಜ್ಯ ಸರ್ಕಾರದ ಹೆಸರು ವಾಸಿಯಾದ ಅತಿಥಿಗೃಹ ಇದಾಗಿದೆ.





## ಇಲವಾಲ ವಾಸದ ಬಂಗ್ಲೆ

ಮೈಸೂರಿನಲ್ಲಿ ಬ್ರಿಟೀಷ್ ರೆಸಿಡೆಂಟ್‌ರಾದ ಆರ್ಥರ್ ಕೋಲ್ (1809–1825) ಅವರ ನಿವಾಸವಾಗಿದ್ದ ಈ ಬಂಗ್ಲೆ ನಗರದ ವಾಯುವ್ಯ ದಿಕ್ಕಿನಲ್ಲಿ 14 ಕಿಮೀ ದೂರದಲ್ಲಿದೆ. ಇದರ ವಿನ್ಯಾಸ ಐರ್‌ಲೆಂಡ್‌ನ ಎನ್ನಿಸ್‌ಕಿಲೆನ್ ಕಟ್ಟಡ ಅನುಸರಿಸಿದೆ.

## ಜಿಲ್ಲಾಧಿಕಾರಿಗಳ ಕಛೇರಿ

ಗೊರ್ಡಾನ್ ಪಾರ್ಕ್‌ನಲ್ಲಿರುವ ಭವ್ಯವಾದ ಈ ಕಟ್ಟಡ (1895) ಇಂದು ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯಾಗಿದೆ. 1923ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯು ಇಲ್ಲಿ ನಡೆಯುತ್ತಿತ್ತು. ಈ ಕಟ್ಟಡದಲ್ಲಿ ಎರಡು ಸಭಾಂಗಣಗಳು, 27 ಕೊಠಡಿಗಳು, ಒಂದು ಖಜಾನೆ ಕೊಠಡಿ ಹಾಗೂ ಕಟ್ಟಡದ ಸುತ್ತಲೂ ಆವಾರ ಪಡಸಾಲೆ ಹೊಂದಿದೆ. ಅಲ್ಲದೇ ಎರಡು ಆವಾರಗಳಿವೆ. ಎರಡು ಅಂತಸ್ತುಗಳಿರುವ ಕಟ್ಟಡ ಮಧ್ಯದಲ್ಲಿನ ಗುಮ್ಮಟವು ಕಳಶ ಹೊಂದಿದೆ. ಮೈಸೂರು ಅರಸು ವಂಶಕ್ಕೆ ಆಡಳಿತವನ್ನು ಮರು ಒಪ್ಪಿಸುವಾಗ ಬ್ರಿಟಿಷ್ ಕಮಿಷನರ್ ಹಾಗೂ ನಂತರ ಬ್ರಿಟಿಷ್ ರೆಸಿಡೆಂಟ್ ಆದ ಸರ್ ಜೇಮ್ಸ್ ಗೊರ್ಡಾನ್‌ರವರ ಮನಸೆಳೆಯುವ ಪ್ರತಿಮೆ ಕಟ್ಟಡ ಮುಂಭಾಗದಲ್ಲಿದೆ.



## ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ

ಮಹಾರಾಜ ಹತ್ತನೆಯ ಚಾಮರಾಜ ಒಡೆಯರ್ (1881–1894) ಅವರ ಹೆಸರನ್ನು ಹೊಂದಿ ಸಯ್ಯಾಜಿರಾವ್ ರಸ್ತೆಯಲ್ಲಿರುವ ಈ ಕಟ್ಟಡದ ಶಂಕುಸ್ಥಾಪನೆಯನ್ನು ವೇಲ್ಸನ್ ರಾಜಕುಮಾರ ಆಲ್ಬರ್ಟ್ ವಿಕ್ಟರ್ 1906ರಲ್ಲಿ ನೆರವೇರಿಸಿದರು.

ವಿಶಾಲವಾದ ಈ ಕಟ್ಟಡದಲ್ಲಿ ಈಗ ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ ಕಾವೇರಿ ಕರಕುಶಲ ವಸ್ತುಗಳ ಮಾರಾಟ ಮಳಿಗೆ ಮತ್ತು ಇಶರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ.





## ರಂಗಾಚಾರ್ಲು ಸ್ಮಾರಕ ಭವನ

ಅರಮನೆ ಆವರಣದ ಉತ್ತರ ಮಹಾದ್ವಾರದ ಬಳಿ ರಂಗಾಚಾರ್ಲು ಸ್ಮಾರಕ ಭವನ ಇದೆ. ಸಾರ್ವಜನಿಕರ ದೇಣಿಗೆಯಿಂದ (ವಂತಿಕೆ) 1885ರಲ್ಲಿ ನಿರ್ಮಿಸಲಾದ ಈ ಕಟ್ಟಡವನ್ನು ಪುರಭವನಕ್ಕೆಂದು ಸರ್ಕಾರಕ್ಕೆ ವಹಿಸಲಾಯಿತು. ಇದರಲ್ಲಿರುವ ಸಭಾಂಗಣವನ್ನು ಸಾರ್ವಜನಿಕ ಸಮಾರಂಭಗಳಿಗೆ ನೀಡಲಾಗುತ್ತಿದೆ. ಈ ಹಿಂದೆ ನಗರಸಭೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಗಳು ಈ ಕಟ್ಟಡದಲ್ಲಿದ್ದವು.

ಈ ಕಟ್ಟಡದ ಸುತ್ತಲೂ ಇರುವ ವಿಶಾಲ ಆವರಣ ಸಾರ್ವಜನಿಕ ರಾಜಕೀಯ ಸಮಾರಂಭಗಳು, ಶಾತ್ಕಾಲಿಕ ಜಾತ್ರೆಗಳು, ಮನರಂಜನಾ ಉತ್ಸವಗಳಿಗೆ ಬಳಕೆಯಾಗುತ್ತದೆ ಮತ್ತು ಸಾರ್ವಜನಿಕ ವಿಶ್ರಾಂತಿ ತಾಣವಾಗಿದೆ.

## ಕ್ರಾಫರ್ಡ್ ಹಾಲ್

1947ರಲ್ಲಿ ನಿರ್ಮಿಸಲಾದ ಈ ಕಟ್ಟಡದಲ್ಲಿ ಮೈಸೂರು ವಿಶ್ವವಿದ್ಯಾಲಯ ಮತ್ತು ಉಪಕುಲಪತಿಗಳ ಕಛೇರಿಯಿದೆ. ವಿದ್ಯೆಯ ಅಧಿದೇವತೆ ಸರಸ್ವತಿಯ ಗಾರೆ ಉಬ್ಬು ಶಿಲ್ಪವನ್ನು ಕಟ್ಟಡದ ಮುಂಬದಿಗೆ ಅಳವಡಿಸಲಾಗಿದೆ. ಕೊರಿಂಥಿಯನ್ ಕಂಬಗಳು, ರೋಮನ್ ಮಾದರಿಯ ಕಮಾನುಗಳು ತೆರೆದ ಪಡಸಾಲೆ ಈ ಕಟ್ಟಡಕ್ಕೆ ಭಾರಿ ಮತ್ತು ಮನಸೆಳೆಯುವ ನೋಟವನ್ನು ಒದಗಿಸಿವೆ.



## ವಿಕ್ಟೋರಿಯ ಜ್ಯುಬಿಲಿ ಸಂಸ್ಥೆ


ರಾಣಿ ವಿಕ್ಟೋರಿಯಾಳ (1837–1901) ನೆನಪಿನಾರ್ಥ 1894ರಲ್ಲಿ ನಿರ್ಮಿಸಿದ ಈ ಕಟ್ಟಡದಲ್ಲಿ ಪ್ರಾಚ್ಯವಿದ್ಯಾ ಸಂಸ್ಥೆ (1891) ಕಾರ್ಯನಿರ್ವಹಿಸುತ್ತಿದೆ. ಗೋರ್ಡಾನ್ ಪಾರ್ಕ್‌ನಲ್ಲಿ ಮಹಾರಾಜ ಕಾಲೇಜು ಬಳಿ ಇರುವ ಈ ಕಟ್ಟಡದಲ್ಲಿ ಅನೇಕ ವಿರಳ ಹಸ್ತಪ್ರತಿಗಳು ಮತ್ತು ತಾಳೆ ಗ್ರಂಥಗಳಿವೆ. ಈ ಕಟ್ಟಡದಲ್ಲಿನ ನವ ವಸಾಹತುಶಾಹಿ ವಾಸ್ತುಶಿಲ್ಪವು ಪಬ್ಲಿಕ್ ಆಫೀಸ್ ಕಟ್ಟಡ, ಜಯಲಕ್ಷ್ಮಿ ವಿಲಾಸ ಸೌಧ, ಮಹಾರಾಜ ಕಾಲೇಜು ಕಟ್ಟಡಗಳಲ್ಲಿ ಪ್ರತಿಬಿಂಬಿತವಾಗಿವೆ.



## ದೊಡ್ಡ ಗಡಿಯಾರ

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ (1902–1940) 25 ವರ್ಷಗಳ ಆಳ್ವಿಕೆಯ ನೆನಪಿಗಾಗಿ 1927ರಲ್ಲಿ ಚೌಕಾಕಾರದ 22.85 ಮೀ ಎತ್ತರದ ಗಡಿಯಾರ ಗೋಪುರವನ್ನು ನಿರ್ಮಿಸಲಾಯಿತು. ಕಟ್ಟಡದ ಮೇಲ್ಭಾಗದಲ್ಲಿ ನಾಲ್ಕೂ ಕಡೆ 5 ಅಡಿ ವ್ಯಾಸದ ಗಡಿಯಾರಗಳಿವೆ. ಕಟ್ಟಡದ ತುದಿಯಲ್ಲಿ ರಜಪುತನಾ (ರಾಜಸ್ಥಾನಿ) ಮಾದರಿಯ ಛತ್ರಿ ವಿನ್ಯಾಸ ಮತ್ತು ಗುಮ್ಮಟವಿದೆ. ಅರಮನೆಯ ಸಿಬ್ಬಂದಿಗಳ ದೇಣಿಗೆಯಿಂದ ಈ ಗೋಪುರ ನಿರ್ಮಿಸಲಾಗಿದೆ. ಇದು ರಂಗಾಚಾರ್ಲು ಸ್ಮಾರಕ ಪುರಭವನದ ಬಳಿ ಇದೆ.





## ಲ್ಯಾನ್ಸ್‌ಡೌನ್ ಕಟ್ಟಡ

ವೈಸರಾಯ್ ಲ್ಯಾನ್ಸ್‌ಡೌನ್‌ರವರ ನವೆಂಬರ್ 1892ರ ಮೈಸೂರು ಭೇಟಿಯ ಸವಿನೆನಪಿಗಾಗಿ, ಮೈಸೂರು ಸರ್ಕಾರ ಅಂಗಡಿಗಳ ಸಾಲನ್ನು ನಿರ್ಮಿಸಿತು. ಇದು ಇಂದು ಲ್ಯಾನ್ಸ್‌ಡೌನ್ ಬಜಾರ್ ಕಟ್ಟಡವೆಂದು ಪ್ರಸಿದ್ಧಿಯಾಗಿದೆ. ಕರ್ಜನ್ ಪಾರ್ಕಿನ ಪಶ್ಚಿಮ ಗಡಿಭಾಗದಲ್ಲಿ ಈ ಕಟ್ಟಡವಿದೆ. ಅಗಲವಾದ ಸಯ್ಯಾಜಿರಾವ್ ರಸ್ತೆಗೆ ಹೊಂದಿಕೊಂಡಂತೆ ಇರುವ ಈ ಕಟ್ಟಡ ಮೊದಲ ಅಂತಸ್ಥಿನಿಂದ ಕೂಡಿದ್ದ ಭವ್ಯವಾದ ಈ ಕಟ್ಟಡ ನಗರಕ್ಕೆ ಒಂದು ಆಭರಣದಂತೆ ಶೋಭಿಸುತ್ತದೆ.



## ದೇವರಾಜ ಮಾರುಕಟ್ಟೆ

ಮೈಸೂರು ನಗರದ ಪ್ರಮುಖ ಮಾರುಕಟ್ಟೆಗಳು ದೇವರಾಜ ಮತ್ತು ಮಂಡಿ ಮಾರುಕಟ್ಟೆ, ಮುಮ್ಮಡಿ ಕೃಷ್ಣರಾಜ ಒಡೆಯರ್ (1793–1831)ರವರ ದಿವಾನರಾದ ದಿವಾನ್ ಪೂರ್ಣಯ್ಯನವರು ಕಾವೇರಿ ನೀರನ್ನು ಒಂದು ದೊಡ್ಡ ಕಾಲುವೆಯ ಮುಖಾಂತರ ನಗರಕ್ಕೆ ತಂದಿದ್ದರು. ಈ ದೇವರಾಜ ಮಾರುಕಟ್ಟೆಯನ್ನು ನೀರಿನ ನಾಲೆಯ ಒಂದು ಭಾಗದ ಮೇಲೆ ನಿರ್ಮಿಸಲಾಗಿದೆ. ಯೋಜಿತ ವಿನ್ಯಾಸದೊಂದಿಗೆ ಸಯ್ಯಾಜಿರಾವ್ ರಸ್ತೆಯ ಬದಿಯಲ್ಲಿರುವ ಮಾರುಕಟ್ಟೆಯು ಅಲಂಕೃತ ಮುಂಭಾಗ ಮತ್ತು ಇಳಿಜಾರು ಮಾಡನ್ನು ಹೊಂದಿದೆ.





## ಕೃಷ್ಣರಾಜೇಂದ್ರ ಆಸ್ಪತ್ರೆ

1918ರಲ್ಲಿ ನಿರ್ಮಿಸಲಾದ ಕೃಷ್ಣರಾಜೇಂದ್ರ ಆಸ್ಪತ್ರೆಯು ಆಧುನಿಕ ಅಮೇರಿಕದ ಪುನರುತ್ಥಾನ ಶೈಲಿಯೊಂದಿಗೆ ಸ್ಥಳೀಯ ಕಮಾನುಗಳು, ಕೊರಿಂಥಿಯನ್ ಜೋಡಿ ಕಂಭಗಳು ಮತ್ತು ತ್ರಿಕೋನಾಕಾರದ ಮಾಡು ಹಾಗೂ ಅಷ್ಟಕೋನಾಕಾರದ ಮೇಲೆ ನಿಂತಿರುವ ಪಾಂಥಿಯನ್ ಮಾದರಿಯ ಕಡಿಮೆ ಎತ್ತರದ ಗುಮ್ಮಟದಿಂದ ಕೂಡಿದೆ. ಕಟ್ಟಡವು ಎರಡು ಅಂತಸ್ಥುಗಳಿಂದ ಕೂಡಿದ್ದು ವಿಶಾಲವಾದ ವಾರ್ಡ್‌ಗಳನ್ನು ಹೊಂದಿದೆ. ಮಧ್ಯದ ಗುಮ್ಮಟದ ಎರಡೂ ಬದಿ ಕಟ್ಟಡದ ಕೊನೆಯಲ್ಲಿ ಹೊಂದಿಕೆಯಾಗುವ ಟರೆಟ್ ಮಾದರಿಯ ಹಂಚಿನ ಇಳಿಜಾರು ಮಾಡು ಇದೆ.

ಕಟ್ಟಡದ ಹೊರಮೈಯಲ್ಲಿ ಕಂಭಗಳ ಮೇಲಿನ ಬೋದಿಗೆಗಳು, ಛಾವಣಿಯ ಕೆಳಗಿನ ಗೋಡೆ ಮತ್ತು ಕೈಪಿಡಿಗಳಲ್ಲಿ ಅಲಂಕೃತ ವಿನ್ಯಾಸಗಳಿವೆ. ವಾಸ್ತುಶೈಲಿಯಿಂದ ಐಯಾನಿಕ್ ಮಾದರಿಯನ್ನು ಪ್ರಮುಖವಾಗಿ ಬಳಸಲ್ಪಟ್ಟಿದೆ.



## ಚಾಮರಾಜೇಂದ್ರ ವೃತ್ತ

ಅರಮನೆ ಕೋಟೆಯ ಉತ್ತರ ಮಹಾದ್ವಾರದ ಮುಂಭಾಗದಲ್ಲಿ ಈ ವಿಶಾಲ ಮತ್ತು ಆಕರ್ಷಕ ವೃತ್ತವಿದೆ. ಮಹಾರಾಜ ಚಾಮರಾಜ ಒಡೆಯರ್ ಅವರ ಅಮೃತಶಿಲೆಯ ಪುತ್ಥಳಿ ಮಂಟಪದಲ್ಲಿದೆ. ಇಟಲಿಯಿಂದ ಈ ಪುತ್ಥಳಿಯನ್ನು ಕೆತ್ತಿ ತರಲಾಯಿತಾದರೂ ಇದು ಮಹಾರಾಜರನ್ನೂ ಹೋಲದ ಕಾರಣ ಮುಂಬಯಿಯ ಪ್ರಸಿದ್ಧ ಭಾರತೀಯ ಶಿಲ್ಪಿ ಜಿ.ಕೆ. ಮಹತ್ರೆ ಅವರಿಂದ ಮರು ರೂಪ ಕೊಡಲ್ಪಟ್ಟಿತು. ಈ ಶಿಲ್ಪಿಯು ಮುಂಬೈಯ ವಿಕ್ಟೋರಿಯಾ ರೈಲು ನಿಲ್ದಾಣ ಕಟ್ಟಡದ ನಿರ್ಮಾಣ ಕೆಲಸ ಕೂಡಾ ನಿರ್ವಹಿಸಿರುತ್ತಾರೆ.



## ಕೃಷ್ಣರಾಜೇಂದ್ರ ವೃತ್ತ

ಈ ವೃತ್ತದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ (1902–1940) ಪ್ರತಿಮೆಯು ಮೈಸೂರು ನಗರದ ಕೇಂದ್ರ ಬಿಂದು. ಅಷ್ಟಕೋನಾಕೃತಿಯ ಮಂಟಪದ ಮೇಲೆ ಸುಲಿದ ಕಿತ್ತಳೆ ಹಣ್ಣಿನ ತೊಳೆಗಳಂತೆ ತೋರುವ ಗುಮ್ಮಟವಿದೆ. ರಾಜರ್ಷಿ ಎಂದೇ ಕರೆಯಲಾಗುವ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಪ್ರತಿಮೆಯನ್ನು ಪ್ರಸಿದ್ಧ ಶಿಲ್ಪಿ ಆರ್.ಪಿ. ಕಾಮತ್ ಕೆತ್ತಿದ್ದಾರೆ.



## ಚಾಮರಾಜೇಂದ್ರ ಮೃಗಾಲಯ

ಮೈಸೂರಿನ ಬೇಸಿಗೆ ಅರಮನೆಯ ಸನಿಹ ಕೆಲವು ಜಲಚರಗಳು, ಪಕ್ಷಿಗಳು, ಎರಡು ಹುಲಿ ಮತ್ತು ಕರಡಿಗಳಿದ್ದವು. ಇವುಗಳೊಂದಿಗೆ ಜೀಬ್ರಾ ಮತ್ತು ಆಫ್ರಿಕಾದ ದೊಡ್ಡ ಜಾತಿಯ ಮಂಗವೊಂದರ





ಸೇರ್ಪಡೆಯಿಂದ, ಮೃಗಾಲಯವನ್ನು ಮಹಾರಾಜಾ ಚಾಮರಾಜೇಂದ್ರ ಒಡೆಯರ್ 1892ರಲ್ಲಿ ಸ್ಥಾಪಿಸಿದರು.

ಈ ಮೃಗಾಲಯದ ಮೇಲ್ವಿಚಾರಣೆಗಾಗಿ ಅಧೀಕ್ಷಕರನ್ನು ನೇಮಕ ಮಾಡಿ, ಪಶು ಪಕ್ಷಿಗಳ ಸಂಖ್ಯೆಯನ್ನು ಆಗಿಂದಾಗ್ಗೆ ಹೆಚ್ಚಿಸಲಾಯಿತು. ಸಿಂಹ, ಕ್ಯಾಂಗರೂ, ಜಿರಾಫೆ ಇವುಗಳ ಸಂತಾನೋತ್ಪತ್ತಿ ಯೋಜನೆ 1902 ರಿಂದಲೇ ಪ್ರಾರಂಭವಾಯಿತು. 1947–48ರಲ್ಲಿ 300 ಸಸ್ತನಿಗಳು, 365 ಪಕ್ಷಿಗಳು, 15 ಜಲಚರಗಳು ಇದ್ದವು. ಪ್ರಸ್ತುತ ಮೃಗಾಲಯ ಅರಣ್ಯ ಇಲಾಖೆಯ ಸುಪರ್ದಿನಲ್ಲಿದೆ. ಈಗ ವಿವಿಧ ದೇಶಗಳಿಂದ ಆಮದು ಮಾಡಿಕೊಳ್ಳಲಾದ ಸುಮಾರು 110 ಪ್ರಭೇದಗಳ (ಜಾತಿಯ) ಪಕ್ಷಿಗಳು ಮೃಗಾಲಯದಲ್ಲಿವೆ.

## ಕರ್ಜನ್ ಪಾರ್ಕ್

ಮೈಸೂರಿನ ಉದ್ಯಾನವನಗಳಲ್ಲೊಂದಾದ ಕರ್ಜನ್ ಪಾರ್ಕ್‌ನ್ನು 1902ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಅಧಿಕಾರ ಸ್ವೀಕರಿಸಿದ ಸಮಯದಲ್ಲಿ ಕೆಮರೂನ್‌ರಿಂದ ವಿನ್ಯಾಸಗೊಳಿಸಲಾಯಿತು. ಮೈಸೂರಿನ ಅರಮನೆ ಕೋಟೆಯ ಉತ್ತರ ಭಾಗದಲ್ಲಿನ ಈ ಉದ್ಯಾನವನ ನಾಗರೀಕರ ಸಂಜೆಯ ಮನರಂಜನೆ ಸ್ಥಳ. ಸುಮಾರಾಗಿ ಹೆಚ್ಚಿನ ವಿಸ್ತಾರದಲ್ಲಿ ನೀರಿನ ಕಾರಂಜಿಗಳು, ಮೂಲೆಗಳಲ್ಲಿ ನೆರಳು ನೀಡುವ ಮರಗಳಿಂದ ಸುಂದರವಾಗಿ ವಿನ್ಯಾಸಗೊಳಿಸಲಾಗಿದೆ.

# ಪಾರಂಪರಿಕ ಕೆರೆಗಳು

## ಲಿಂಗಾಂಭುದಿ ಕೆರೆ

ಇದು ಮೈಸೂರಿನ ಅತಿ ದೊಡ್ಡ ಮತ್ತು ಹಳೆಯ ಕೆರೆ. ನೀರಾವರಿ ಉಪಯೋಗವಲ್ಲದೇ ಇದು ಸುಮಾರು 250 ವಿವಿಧ ಪ್ರಭೇದದ ಪಕ್ಷಿಗಳ ವಲಸೆ ತಾಣವಾಗಿದೆ. ಹೆಜ್ಜಾರ್ಲೆ (Spot Billed Pelican), ನೀರು ಕಾಗೆ (Indian Darter), ಬಣ್ಣದ ಬಾತುಕೋಳಿ (Pin tailed Duck), ಬಣ್ಣದ ಕೊಕ್ಕರೆ (Painted stork), ಶೊವೆಲ್ಲರ್ (Shoveller), ವಿಸಲಿಂಗ್ ಟೀಲ್ (Whistling teal), ಪಕ್ಷಿಗಳು ಇಲ್ಲಿ ಭೇಟಿ ನೀಡುತ್ತವೆ. ಅಳಿವಿನ ಅಂಚಿನಲ್ಲಿರುವ ಕೆಲವು ಪಕ್ಷಿಗಳನ್ನು ಇಲ್ಲಿ ಕಾಣಬಹುದು. ಜೀವ ವೈವಿಧ್ಯವುಳ್ಳ ಈ ಕೆರೆ ಮತ್ತು ಔಷದೀಯ ಸಸ್ಯವನ ವಿದ್ವಾಂಸರನ್ನು ಹಾಗೂ ಸಂಶೋಧನಾ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ.





## ಕುಕ್ಕರಹಳ್ಳಿ ಕೆರೆ

ಮೈಸೂರು ವಿಶ್ವವಿದ್ಯಾಲಯ ಆಡಳಿತ ಕಛೇರಿ ಕಟ್ಟಡ ಮತ್ತು ಮಾನಸ ಗಂಗೋತ್ರಿ ಆವರಣ ನಡುವೆ ಸುಂದರ ಕುಕ್ಕರಹಳ್ಳಿ ಕೆರೆ ಇದೆ. ಅನೇಕ ಕವಿ ಮತ್ತು ಬರಹಗಾರರಿಗೆ ಈ ಕೆರೆ ಸ್ಫೂರ್ತಿಯ ಸೆಲೆಯಾಗಿದೆ. ಕೆರೆಯ ಉತ್ತರದ ದಂಡೆಯಿಂದ ಕಾಣುವ ನೋಟ ಆಕರ್ಷಣೀಯವಾಗಿದೆ. ಸುಮಾರು 180 ಪ್ರಭೇದಗಳ ಪಕ್ಷಿಗಳು ಇಲ್ಲಿವೆ. ಅವುಗಳಲ್ಲಿ ಕೆಲವು ನೀರಿನಲ್ಲಿ ನೆಲಸಿರುವವು ಮತ್ತು ಹಲವು ಪಕ್ಷಿಗಳು ದೂರದ ದೇಶಗಳಿಂದ ಇಲ್ಲಿ ವರ್ಷದಲ್ಲೊಮ್ಮೆ ಬರುತ್ತವೆ. ಅವುಗಳಲ್ಲಿ ಸೈಬೀರಿಯಾ ದೇಶದಿಂದಲೂ ಕೆಲವು ಇಲ್ಲಿಗೆ ಬರುತ್ತವೆ. ಕೆರೆಯ ಅಂಚಿನಲ್ಲಿ 4.5 ಕಿ.ಮೀ. ಉದ್ದದ ಪಾದಚಾರಿ ಮಾರ್ಗ ಇದ್ದು ಇಕ್ಕೆಲಗಳಲ್ಲಿ ಮರಗಿಡಗಳಿವೆ. ಬೆಳಗಿನ ಕಾಲ್ನಡಿಗೆ, ಪಕ್ಷಿ ವೀಕ್ಷಕರು ಮತ್ತು ವಿಶ್ರಾಂತಿ ಪಡೆಯುವವರಿಗೆ ಈ ಕೆರೆ ಪ್ರಶಾಂತ ತಾಣವಾಗಿದೆ. ಈ ಕುಕ್ಕರಹಳ್ಳಿ ಕೆರೆಯಿಂದಲೇ ಮೈಸೂರು ನಗರಕ್ಕೆ 1893ರವರೆಗೆ ನೀರು ಸರಬರಾಜು ಮಾಡಲಾಗುತ್ತಿತ್ತು.

## ಕಾರಂಜಿ ಕೆರೆ

ಚಾಮುಂಡಿ ಬೆಟ್ಟದ ತಳದಲ್ಲಿರುವ ಈ ಕೆರೆಗೆ ಸುಮಾರು 70 ಕ್ಕೂ ಹೆಚ್ಚು ವಿವಿಧ ಬಗೆಯ ಪಕ್ಷಿಗಳು ವರ್ಷದಲ್ಲಿ ಒಮ್ಮೆ ಭೇಟಿ ನೀಡುತ್ತವೆ. ಇದು ಉತ್ತಮ ಪಕ್ಷಿಧಾಮ. ಇತ್ತೀಚಿನ ಸಂರಕ್ಷಣೆ ಮತ್ತು ಅಭಿವೃದ್ಧಿಯ ನಂತರ 90 ಎಕರೆ ವಿಸ್ತಾರದ ಈ ಕೆರೆಯ ಸನಿಹ ಚಿಟ್ಟೆಗಳ ಪಾರ್ಕ್, ಮಕ್ಕಳ ಉದ್ಯಾನವನ, ಕಾವಲು ಗೋಪುರ ಮತ್ತು ದೋಣಿ ವಿಹಾರದ ಏರ್ಪಾಡು ಮಾಡಲಾಗಿದೆ. ದೇಶದಲ್ಲಿ ಉದ್ದನೆಯ ಹಕ್ಕಿಗಳ ಪಕ್ಷಿ ಪಂಜರದ ಗೂಡು ಇಲ್ಲಿದೆ.



# ಮೈಸೂರಿನ ನವರತ್ನಗಳು

## ಮೈಸೂರು ಮಲ್ಲಿಗೆ



ಸುವಾಸಿತ ನಗರವೆಂದು ಹೆಸರಾಗಿರುವ ಮೈಸೂರಿನಲ್ಲಿ ಪರಿಮಳ ಬೀರುವ ಮಲ್ಲಿಗೆ ದೊರೆಯುತ್ತದೆ. ಪ್ರತಿ ಮನೆಯಲ್ಲಿ ದೇವರ ಪೂಜೆಗೆ ಹೆಂಗಳೆಯರ ಮುಡಿಗೆ ಹಾರದ ರೂಪದಲ್ಲಿ ಹಾಗೂ ಮೊಗ್ಗಿನ ಜಡೆಯಲ್ಲಿ ಬಳಸಲ್ಪಡುತ್ತದೆ.

## ಮೈಸೂರು ಗಂಧದ ಮರ



ಮೈಸೂರು ಗಂಧದ ಮರ ಪ್ರಪಂಚದಾದ್ಯಂತ ಖ್ಯಾತಿ ಪಡೆದಿದೆ. ಈ ಮರದಿಂದ ದೇವತಾ ಮೂರ್ತಿಗಳು, ವಿವಿಧ ವಿನ್ಯಾಸಗಳ ಚೌಕಟ್ಟುಗಳನ್ನು ತಯಾರಿಸಲಾಗುತ್ತದೆ. ಈ ಮರದಿಂದ ಸಂಸ್ಕರಿಸಲಾದ ಎಣ್ಣೆಯು ಸುವಾಸಿತ ದ್ರವ್ಯವಾಗಿ, ಊದಿನ ಕಡ್ಡಿಗಳಲ್ಲಿ, ಮುಖಕ್ಕೆ ಹಚ್ಚುವ ಪೌಡರ್‌ಗಳಲ್ಲಿ ಮತ್ತು ಸಾಬೂನುಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ.

## ಮೈಸೂರು ಪಾಕ್



ನಗರದ ಹೆಸರನ್ನು ಹೊಂದಿದ ಬಾಯಲ್ಲಿ ನೀರೂರಿಸುವ ಸಿಹಿ. ಇದನ್ನು ಕಡ್ಲೆಬೇಳೆ ಹಿಟ್ಟು ಮತ್ತು ಸಕ್ಕರೆಯಿಂದ ತುಪ್ಪದಲ್ಲಿ ತಯಾರಿಸಲಾಗುತ್ತದೆ.



## ಮೈಸೂರು ವಿಳ್ಯದೆಲೆ



ವಿಳ್ಯದೆಲೆಯನ್ನು ಸುಣ್ಣ ಮತ್ತು ಅಡಿಕೆಯೊಂದಿಗೆ ಊಟದ ನಂತರ ತಿನ್ನಲಾಗುತ್ತದೆ. ಇದು ಆಹಾರದ ಜೀರ್ಣಕ್ಕೆ ಸಹಕಾರಿ ಎಂದು ನಂಬಲಾಗಿದೆ. ವಿಳ್ಯದೆಲೆಯನ್ನು ಧಾರ್ಮಿಕ ಮತ್ತು ಪೂಜಾ ಸಂದರ್ಭದಲ್ಲಿಯೂ ಸಹ ಬಳಸಲಾಗುತ್ತದೆ.

## ಮೈಸೂರು ಪೇಟಾ



ತಲೆಯನ್ನು ಅಲಂಕರಿಸುವ ಹತ್ತಿಯ ಅಥವಾ ರೇಷ್ಮೆ ವಸ್ತ್ರ. ಇದರ ಅಂಚುಗಳನ್ನು ಚಿನ್ನದ ಅಥವಾ ಬೆಳ್ಳಿಯ ದಾರಗಳಿಂದ ವಿನ್ಯಾಸಗೊಳಿಸಿರುತ್ತಾರೆ. ವಿವಿಧ ಬಣ್ಣಗಳಲ್ಲಿ ಲಭ್ಯವಿರುವ ಈ ಪೇಟಾವನ್ನು ಶುಭ ಸಂದರ್ಭಗಳಲ್ಲಿ ಬಳಸಲಾಗುತ್ತದೆ.

## ಮೈಸೂರು ರೇಷ್ಮೆ



ಪವಿತ್ರ ರೇಷ್ಮೆಯನ್ನು ಬಹು ವಿಧವಾಗಿ ಬಳಸಲಾಗುತ್ತದೆ. ರೇಷ್ಮೆ ಸೀರೆ, ಸ್ಕಾರ್ಫ್, ಶರ್ಟ್, ಪಂಚೆ, ಟೈ ಇತ್ಯಾದಿಗಳಾಗಿ ಉಪಯೋಗಿಸಲ್ಪಡುತ್ತದೆ. ಎಲ್ಲರೂ ವಿಶೇಷ ಸಂದರ್ಭಗಳಲ್ಲಿ ಇಷ್ಟಪಡುವ ಮತ್ತು ಬಳಸುವ ವಸ್ತು.

## ಮೈಸೂರು ಟಾಂಗಾ

ನೀವು ಮೈಸೂರು ರಸ್ತೆಗಳಲ್ಲಿ ಆಗ್ಗಾಗ್ಗೆ ಕುದುರೆಯ ಖುರ ಪುಟದ ಸದ್ದುಗಳನ್ನು ಕೇಳುತ್ತಿದ್ದರೆ ಅದು ಮೈಸೂರಿನ ಹೆಮ್ಮೆ ಎಂದೂ ಮತ್ತು ಅದು ಮೈಸೂರು ಟಾಂಗಾ ಎಂದು ಸುಲಭವಾಗಿ ಹೇಳಬಹುದು. ಇದರ ಸ್ಥಳವನ್ನು ನಿಧಾನವಾಗಿ ಆಟೋ ರಿಕ್ಷಾಗಳು ಆಕ್ರಮಿಸುತ್ತಿವೆ.



## ಮೈಸೂರು ಬದನೆ



ಈರನಗೆರೆ ಬದನೆಕಾಯಿ ಬಹಳ ಪ್ರಸಿದ್ಧ. ಹಸಿರ ಬಣ್ಣದ ಉದ್ದನೆಯ ಬದನೆ ಇಲ್ಲಿನ ವೈಶಿಷ್ಟ್ಯ. ಈಗ ನೇರಲೆ ಬಣ್ಣದ ಬದನೆಯೂ ಲಭ್ಯವಿದೆ. ವಿವಿಧ ಆಹಾರ ಖಾದ್ಯಗಳ ತಯಾರಿಕೆಯಲ್ಲಿ ಬಳಸಲ್ಪಡುತ್ತದೆ. ವಾಂಗಿಬಾತ್‌ನಲ್ಲಿ ಇದು ಮುಖ್ಯ ತರಕಾರಿ.

## ಮೈಸೂರು ಚಿತ್ರಕಲೆ

ವಿಜಯನಗರ ಪತನಾನಂತರ ಮೈಸೂರು ಒಡೆಯರ್ ಅರಸರು ಅನೇಕ ಚಿತ್ರಕಾರರ ಕುಟುಂಬಗಳಿಗೆ ಆಶ್ರಯ ನೀಡಿದರು. ಮೈಸೂರು ಶೈಲಿಯ ಪ್ರಾರಂಭಿಕ ಚಿತ್ರಗಳು ಇಂದು ಅಲ್ಪ ಪ್ರಮಾಣದಲ್ಲಿ ಲಭ್ಯವಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ ಮತ್ತು ನಂತರ ಕಾಲದಲ್ಲಿ ಈ ಕಲೆಗೆ ಹೆಚ್ಚು ಪ್ರೋತ್ಸಾಹ ದೊರೆಯಿತು. ಶ್ವೇತ ವರಾಹಸ್ವಾಮಿ ದೇವಾಲಯ,




ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ ಅಲ್ಲದೇ ಮಹಾರಾಜರ ಖಾಸಗಿ ಅರಮನೆಯಲ್ಲಿ ಈ ಚಿತ್ರಗಳಿವೆ. ಜಗನ್ಮೋಹನ ಆರ್ಟ್ ಗ್ಯಾಲರಿಯಲ್ಲಿ ರಾಜಮನೆತನಕ್ಕೆ ಸಂಭಂಧಿಸಿದ ಮತ್ತು ಇತರ ವಿಷಯಗಳಿಗೆ ಸಂಭಂಧಿಸಿದ ಚಿತ್ರಗಳಿವೆ.


ಸಾಂಪ್ರದಾಯಿಕ ಮೈಸೂರು ಶೈಲಿಯ ಚಿತ್ರಕಲೆ ತಂಜಾವೂರಿನ ಚಿತ್ರಕಲೆಗಿಂತಲೂ ಹೆಚ್ಚು ಸಂಕೀರ್ಣವೆಂದು ತಿಳಿಯಲಾಗಿದೆ. ಈ ಶೈಲಿಯ ಚಿತ್ರಕಲೆಯಲ್ಲಿ ಲಕ್ಷ್ಮೀ, ಸರಸ್ವತಿ, ಚಾಮುಂಡೇಶ್ವರಿ, ಕೃಷ್ಣ, ರಾಮ ಇತ್ಯಾದಿ ದೇವರುಗಳ ಚಿತ್ರಗಳನ್ನು ಹೆಚ್ಚು ಕಾಣಬಹುದು.





ಮೈಸೂರು ನಕ್ಷೆ
ಕೆಆರ್‌ಎಸ್ ಬೃಂದಾವನ ಗಾರ್ಡನ್ ಕಡೆಗೆ
ಹಾಸನ ಕಡೆಗೆ
ಇನ್ಫೋಸಿಸ್ ಕ್ಯಾಂಪಸ್
ಕೆ.ಆರ್.ಎಸ್. ಫ್ಯಾಂಟಸಿ ಪಾರ್ಕ್
ಬೆಂಗಳೂರು ಕಡೆಗೆ
SH 17
ಶ್ರೀರಂಗಪಟ್ಟಣ ಮಂಡ್ಯ ಬೆಂಗಳೂರು ಕಡೆಗೆ
ವರ್ತುಲ ರಸ್ತೆ
ಹುಣಸೂರು ಮಡಿಕೇರಿ ಮಂಗಳೂರು ಕಡೆಗೆ
SH 86
ಹುಣಸೂರು ರಸ್ತೆ
ಸಂತ ಫಿಲೋಮಿನ ಚರ್ಚ್
ಸಿ.ಎಫ್.ಟಿ.ಆರ್.ಐ
ರೈಲ್ವೆ ಮ್ಯೂಸಿಯಂ
ರೈಲು ನಿಲ್ದಾಣ
ಜಾನಪದ ವಸ್ತುಸಂಗ್ರಹಾಲಯ
ವರ್ತುಲ ರಸ್ತೆ
ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ
ಚಾಮುಂಡಿ ಸ್ಟೇಡಿಯಂ
ಕಲಾಮಂದಿರ
ಕುಕ್ಕರಹಳ್ಳಿ ಕೆರೆ
ಮೈಸೂರು ಯೂನಿವರ್ಸಿಟಿ
ಸಿಟಿ ಬಸ್ ನಿಲ್ದಾಣ
ರೀಜನಲ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ
SH 86
ಜಗನ್ಮೋಹನ ಅರಮನೆ
ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್
ಮೈಸೂರ್ ಪ್ಯಾಲೇಸ್
ಮೃಗಾಲಯ
ಕಾರಂಜಿ ಕೆರೆ
ಕನಕಪುರ, ಬೆಂಗಳೂರು ಕಡೆಗೆ
NH 212
ಲಲಿತ ಮಹಲ್
ಮೈಸೂರು ಟರ್ಫ್ ಕ್ಲಬ್
ಪ್ಲಾನೆಟ್ ಎಕ್ಸ್
ಎಸ್‌ಡಿಎಮ್ ಇನ್‌ಸ್ಟಿಟ್ಯೂಟ್
ಟಿ.ನರಸೀಪುರ ಕೊಳ್ಳೇಗಾಲ ಕಡೆಗೆ
ನಂದಿ
ಚಾಮುಂಡಿ ಬೆಟ್ಟ
ಚಾಮುಂಡೇಶ್ವರಿ ದೇವಸ್ಥಾನ
NH 212
ವರ್ತುಲ ರಸ್ತೆ
N
ಗುಂಡ್ಲುಪೇಟೆ, ಊಟಿ
ವೈಯನಾಡ್, ಕ್ಯಾಲಿಕಟ್ ಕಡೆಗೆ
ನಕ್ಷೆ ಪ್ರಮಾಣಕ್ಕನುಗುಣವಾಗಿಲ್ಲ
ಕಬಿನಿ ಡ್ಯಾಮ್ ವೈಯನಾಡ್ ಕಡೆಗೆ
ಚಾಮರಾಜನಗರ ಕಡೆಗೆ




**ಮೈಸೂರು ನಗರ ನಕ್ಷೆ 1902**




**ಮೈಸೂರು ನಗರ ನಕ್ಷೆ 1930**





ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಬೆಂಗಳೂರು